
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕ್ರಿಕೆಟ್
ಶ್ರೀಲಂಕಾವು ದಕ್ಷಿಣ ಆಫ್ರಿಕಾದ ಮಾಜಿ ಆಟಗಾರ ಗ್ಯಾರಿ ಕರ್ಸ್ಟನ್ ಅವರನ್ನು ತನ್ನ ತಂಡಕ್ಕೆ ನೂತನ ಕೋಚ್ ಆಗಿ ಸೋಮವಾರ ನೇಮಕ ಮಾಡಿದೆ.

10 ಮಾರ್ಚ್ 2026 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 354 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629





ಮಹಿಳಾ ಸಬಲೀಕರಣ - ಮಕ್ಕಳ ಕಲ್ಯಾಣದ ಕಿರುನೋಟ » 2



ಭಾರತೀಯರ ಸುರಕ್ಷತೆಯೇ ನಮ್ಮ ಆದ್ಯತೆ » 3



ಕಂದಾಯ ಗ್ರಾಮಗಳ ಪ್ರಸ್ತಾವನೆಗೆ ಗಡುವು » 4

# ರಾಜ್ಯ ಸರ್ಕಾರದಿಂದ ಎತ್ತಿನಹೊಳೆ ಯೋಜನೆ ವಿಳಂಬ

## ತನ್ನ ತಪ್ಪು ಮರೆಮಾಚಿಕೊಳ್ಳಲು ಅಪಪ್ರಚಾರ | ಕಾಂಗ್ರೆಸ್ ವಿರುದ್ಧ ಹೆಚ್.ಡಿ.ದೇವೇಗೌಡ ಕಿಡಿ

• ಪ್ರಜೋದಯ ವರದಿ

**ನವದೆಹಲಿ:** ಎತ್ತಿನಹೊಳೆ, ಮೇಕೆದಾಟು ಯೋಜನೆಗಳ ವಿಳಂಬಕ್ಕೆ ರಾಜ್ಯ ಸರ್ಕಾರವೇ ಕಾರಣ. ಅದನ್ನು ಮರೆಮಾಚಿಕೊಳ್ಳಲು ಕೇಂದ್ರವನ್ನು ದೂರುತ್ತಿದೆ. ಕರ್ನಾಟಕದಲ್ಲಿ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯದಿಂದಲೇ ಎತ್ತಿನಹೊಳೆ ಯೋಜನೆ ಆಮೆಗತಿಯಲ್ಲಿ ಸಾಗುತ್ತಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಕಟುವಾಗಿ ಪ್ರಸ್ತಾಪಿಸಿದರು.

ರಾಜ್ಯಸಭೆಯಲ್ಲಿ ಸೋಮವಾರ ಬಜೆಟ್ ಅಧಿವೇಶನದ ಮೇಲಿನ ಚರ್ಚೆಯಲ್ಲಿ ವೇಳೆ ಮಾತನಾಡಿದ ಅವರು, ಕರ್ನಾಟಕದಲ್ಲಿ ನೀರಾವರಿ ಯೋಜನೆಗಳನ್ನು ಸಕಾಲಕ್ಕೆ ಕಾರ್ಯಗತ ಮಾಡಲಾಗದೇ ಸುಖಾಸುಮ್ಮನೆ ಅಪಪ್ರಚಾರ ಮಾಡುತ್ತಿದೆ. ಎತ್ತಿನಹೊಳೆ ಯೋಜನೆ ಕಾರ್ಯಗತ ಮಾಡುವಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಅನೇಕ ತಪ್ಪುಗಳನ್ನು ಮಾಡಿದೆ. ಪರಿಸರಕ್ಕೆ ಧಕ್ಕೆ ತಂದಿದೆ ಹಾಗು ಅನೇಕ ಕಾನೂನು, ನಿಯಮಗಳನ್ನು ಉಲ್ಲಂಘನೆ ಮಾಡಿದೆ ಎಂದು ಆರೋಪಿಸಿದ ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಯೋಜನೆಗೆ ಶಂಕುಸ್ಥಾಪನೆ ಮಾಡಲಾಗಿತ್ತು. ಆಗ ಜಗದೀಶ್ ಶೆಟ್ಟರ್ ಅವರು ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಆಗ ಆ ಯೋಜನೆಯ ಅಂದಾಜು ವೆಚ್ಚ 8 ಸಾವಿರ ಕೋಟಿ ರೂ. ಆಗಿತ್ತು. ಈಗ ಅದು 33 ಸಾವಿರ ಕೋ. ರೂ. ಮೀರಿದೆ. ಈವರೆಗೂ ಒಂದು ಹನಿ ನೀರು ಕೂಡ ಹರಿದಿಲ್ಲವೆಂದು ಟೀಕಿಸಿದರು.

ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು ಜಿಲ್ಲೆಗಳಿಗೆ ತೊಟ್ಟು ನೀರು ಹೋಗಿಲ್ಲ. ಅಷ್ಟೇ ಅಲ್ಲದೆ, ಆ ಯೋಜನೆ ಕಾರ್ಯಕಗತ ಆಗುತ್ತಿರುವ ಹಾಸನ ಜಿಲ್ಲೆಯ ಸಕಲೇಶಪುರಕ್ಕೆ ಹತ್ತಿರದಲ್ಲಿರುವ ಅರಸೀಕರೆ ತಾಲ್ಲೂಕಿಗೆ ನೀರು ಬಂದಿಲ್ಲ. ಈ ಬಗ್ಗೆ ನಾನು ಪುಟಗಟ್ಟಲೆ ಮಾಹಿತಿ ಇಟ್ಟುಕೊಂಡು ಮಾತನಾಡಬಲ್ಲೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾನು ನೀರಾವರಿ ಸಚಿವನಾಗಿ, ಮುಖ್ಯಮಂತ್ರಿಯಾಗಿ ಹಾಗು ಪ್ರಧಾನಿಯಾಗಿ ಕೆಲಸ ಮಾಡಿದ್ದೇನೆ. ನನಗೆ ಈ ಬಗ್ಗೆ ಪೂರ್ಣ ಮಾಹಿತಿ, ಅನುಭವ ಇದೆ. ಮೇಕೆದಾಟು ಯೋಜನೆಗೂ ರಾಜ್ಯ ಸರ್ಕಾರವೇ ಅಡ್ಡಿಯಾಗಿದೆ. ಈ ಯೋಜನೆ ಕಾರ್ಯಗತವಾಗುವ ಪ್ರಸ್ತಾವಿತ ಜಾಗ ನನಗೆ ಗೊತ್ತು. ಒಂದು ಕಡೆ ಆನೆ ಕಾರಿಡಾರ್, ಮತ್ತೊಂಡೆ ಅರಣ್ಯ ಮತ್ತು ವನ್ಯಜೀವಿ ಸಂಪತ್ತು ಇದೆ. ಪ್ರತಿದಿನವೂ ನಡೆಯುತ್ತಿರುವ ಮಾನವ-ವನ್ಯಜೀವಿ ಸಂಘರ್ಷದಿಂದ ಅಮಾಯಕರು ಬಲಿ ಆಗುತ್ತಿದ್ದಾರೆ. ಅದನ್ನು ತಡೆಯಲು ರಾಜ್ಯ ಸರ್ಕಾರಕ್ಕೆ ಆಗಿಲ್ಲವೆಂದು ಆರೋಪಿಸಿದರು.

ಯಾವ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಕೊಡಬೇಕೆಂದು ರಾಜ್ಯ ಸರ್ಕಾರ ಎತ್ತಿಹೊಳೆ ಯೋಜನೆ ಮೂಲಕ ರೂಪಿಸಿತ್ತೋ, ಈಗ ಆ ಯೋಜನೆ ಕಾರ್ಯಗತವಾಗದೇ ಅದೇ ಜಿಲ್ಲೆಗಳಿಗೆ ಬೆಂಗಳೂರಿನ ಕೊಳಚೆ ನೀರನ್ನು ಮೂರು ಹಂತಗಳಲ್ಲಿ ಶುದ್ಧೀಕರಿಸದೆ ಮಲೀನ ನೀರನ್ನು ಹರಿಸುತ್ತಿದೆ. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳು ಎದುರಿಸುತ್ತಿರುವ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಹಾಗು ಕೇಂದ್ರದ ಅರಣ್ಯ, ಪರಿಸರ ಜೀವಿಶಾಸ್ತ್ರ ಖಾತೆ ಮಂತ್ರಿಗಳಾದ ಭೂಪೇಂದ್ರ ಯಾದವ್ ಕೂಡಲೇ ಮಧ್ಯಪ್ರವೇಶಿಸಿ ಸರಿಮಾಡಬೇಕು. ಇಲ್ಲವಾದರೆ ಈ ಜಿಲ್ಲೆಯ ಜನರು ವಿಪರೀತ ಬೆಲೆ ತೆರಲಿದ್ದಾರೆಂದು ಹೇಳಿದರು.

### ಭಾಷಣದ ಪ್ರಮುಖಾಂಶ

- ಮೇಕೆದಾಟು ಯೋಜನೆಗೂ ಅಡ್ಡಿ
- ಅರಸೀಕೆರೆಗೂ ಎತ್ತಿನಹೊಳೆ ನೀರು ಹರಿಸಿಲ್ಲ
- ರಾಜ್ಯಸಭೆಯಲ್ಲಿ ಮಾಜಿ ಪ್ರಧಾನಿ ಪ್ರಸ್ತಾಪ



### ಕಾಡಾನೆ-ಮಾನವ ಸಂಘರ್ಷ ತಡೆಯಲು ಆಗಿಲ್ಲ

ಕಾಡಾನೆ-ಮಾನವ ಸಂಘರ್ಷ ಪ್ರತೀ ದಿನವೂ ನಡೆಯುತ್ತಿದೆ. ಹಾಸನ, ಶಿವಮೊಗ್ಗಾ, ಚಿಕ್ಕಮಗಳೂರು, ತರೀಕೆರೆ ಸೇರಿ ಅನೇಕ ಸ್ಥಳಗಳಲ್ಲಿ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆನೆಗಳು ಬೆಳೆಗಳನ್ನು ನಾಶ ಮಾಡುತ್ತಿವೆ ಹಾಗು ತೋಟಗಳಲ್ಲಿ ದುಡಿಮೆ ಮಾಡುವ ರೈತರನ್ನು ಕೊಲ್ಲುತ್ತಿವೆ. ಇದನ್ನು ತಪ್ಪಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿಲ್ಲವೆಂದು ದೇವೇಗೌಡರು ದೂರಿದರು.

# ಶೀಘ್ರದಲ್ಲೇ ತೋಟಿ ಏತ ನೀರಾವರಿ ಯೋಜನೆ ಪೂರ್ಣ

## ಯೋಜನೆಯಿಂದ 25 ಕೆರೆಗಳಿಗೆ ನೀರು: ಸಿ.ಎನ್.ಬಾಲಕೃಷ್ಣ ಭರವಸೆ

• ಪ್ರಜೋದಯ ವರದಿ

**ನುಗ್ಗೇಹಳ್ಳಿ:** ತೋಟಿ ಏತ ನೀರಾವರಿ ಯೋಜನೆ ಕಾಮಗಾರಿ ಸದ್ಯದಲ್ಲೇ ಪೂರ್ಣಗೊಳಿಸಿ, ಮುಂಬರುವ ಹಂಗಾಮಿನಲ್ಲಿ ಯೋಜನೆಗೆ ಚಾಲನೆ ನೀಡುವ ಮೂಲಕ ನುಗ್ಗೇಹಳ್ಳಿ ಹಾಗು ಹಿರೀಸಾವೆ ಹೋಬಳಿಗಳ 25ಕ್ಕೂ ಹೆಚ್ಚು ಕೆರೆಗಳಿಗೆ ನೀರು ಹರಿಸಲಾಗುವುದೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ಹೋಬಳಿಯ ಅತ್ತಿಹಳ್ಳಿ ಗ್ರಾಮದಲ್ಲಿ 10 ಲ.ರೂ. ವೆಚ್ಚದಲ್ಲಿ ನಿರ್ಮಿಸಿರುವ ಶುದ್ಧ ನೀರಿನ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು, ತೋಟಿ ಹಾಗು ದಿಡಗ ಏತ ನೀರಾವರಿ ಯೋಜನೆಗಳು ಕಾರ್ಯಗತಗೊಂಡರೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ನೂರಕ್ಕೆ ನೂರರಷ್ಟು ನೀರಾವರಿ ಸೌಲಭ್ಯ ಕಲ್ಪಿಸಿದಂತಾಗುತ್ತದೆ. ಚನ್ನರಾಯಪಟ್ಟಣ ರಾಷ್ಟ್ರೀಯ ಹೆದ್ದಾರಿ ಅರಳಾಪುರ ಬಳಿ ರೈತರ ಪರಿಹಾರದ ಸಮಸ್ಯೆಯಿಂದ ಕಾಮಗಾರಿ ವಿಳಂಬವಾಗಿತ್ತು. ಈಗ ರೈತ ಸಂಘದ ಮುಖಂಡರು ಹಾಗು ರೈತರೊಂದಿಗೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಲಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದರು.

ದಿಡಗ ಏತ ನೀರಾವರಿ ಯೋಜನೆಗೆ ಸುಮಾರು 74 ಕೋ.ರೂ. ಅನುದಾನ ಬಿಡುಗಡೆಯಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಕಾಮಗಾರಿ ಆರಂಭವಾಗಲಿದೆ. ಮುಂಬರುವ ಹಂಗಾಮಿನಲ್ಲಿ ತೋಟಿ ಏತ ನೀರಾವರಿ ಯೋಜನೆಯ ಮೂಲಕ ಗ್ರಾಮದ ಮುಂಭಾಗದ ಕೆರೆಗೆ ನೀರು ಹರಿಸಿ ತುಂಬಿಸಲಾಗುವುದು ಎಂದರು.

ಗ್ರಾಮಸ್ಥರ ಬಹುಕಾಲದ ಬೇಡಿಕೆಯಂತೆ ಸುಮಾರು 10 ಲ.ರೂ. ವೆಚ್ಚದಲ್ಲಿ ಶುದ್ಧ ನೀರಿನ ಘಟಕ ನಿರ್ಮಿಸಲಾಗಿದ್ದು, ಅದರ ನಿರ್ವಹಣೆಗೆ ಗ್ರಾಮಸ್ಥರು ಹೆಚ್ಚಿನ ಒತ್ತು ನೀಡಬೇಕು. ಗ್ರಾಮದಲ್ಲಿ ಸುಮಾರು 65 ಲಕ್ಷ ರೂ. ವೆಚ್ಚದಲ್ಲಿ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕೂ ಅನುದಾನ ನೀಡಲಾಗಿದೆ. ಜೊತೆಗೆ ದೇವಾಲಯಗಳ ಜೀರ್ಣೋದ್ಧಾರ, ಬಡಾವಣೆಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ ಅಭಿವೃದ್ಧಿ ಸೇರಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಗಮನ ಹರಿಸಲಾಗಿದೆ ಎಂದು ತಿಳಿಸಿದರು.

ಕೃಷಿ ಪತ್ತಿನ ಮಾಜಿ ಅಧ್ಯಕ್ಷ ಹುಲಿಕೆರೆ ಸಂಪತ್ ಕುಮಾರ್, ಗ್ರಾಮ ಪಂಚಾಯಿತಿ ಸದಸ್ಯರಾದ ಹಿರಿಯಣ್ಣ ಗೌಡ ಗ್ರಾಮಸ್ಥರು ಉಪಸ್ಥಿತರಿದ್ದರು.



# ಬಡಾವಣೆಗೆ ಕೃಷಿ ಭೂಮಿ ಸ್ವಾಧೀನ ಪ್ರಸ್ತಾವನೆಗೆ ವಿರೋಧ

## ಹೂವಿನಹಳ್ಳಿ, ಹೂವಿನಹಳ್ಳಿ ಕಾವಲು ಗ್ರಾಮಸ್ಥರಿಂದ ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಹೂವಿನಹಳ್ಳಿ ಮತ್ತು ಹೂವಿನಹಳ್ಳಿ ಕಾವಲು ಗ್ರಾಮದ ಕೃಷಿ ಭೂಮಿಯನ್ನು ಬಡಾವಣೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಗೆ ವಿರೋಧ ವ್ಯಕ್ತಪಡಿಸಿ ಗ್ರಾಮಸ್ಥರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ವೇಳೆ ಗಾಮಸ್ಥ ದೇವೇಗೌಡ ಅವರು ಮಾತನಾಡಿ, ಜ.29 ರಂದು ಪ್ರಕಟವಾದ ಪ್ರಕಟಣೆಯಲ್ಲಿ ಕೆಹೆಚ್‌ಬಿ ವತಿಯಿಂದ ಒಟ್ಟು 387 ಎಕರೆ ಜಮೀನನ್ನು ವಸತಿ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆ ಬಗ್ಗೆ ತಿಳಿಸಲಾಗಿದೆ. ಪ್ರಕಟಣೆ ಹೊರಬಿದ್ದ 60 ದಿನಗಳೊಳಗೆ ಲಿಖಿತ ಆಕ್ಷೇಪಣೆ ಸಲ್ಲಿಸಲು ಸೂಚಿಸಲಾಗಿದೆ. ಇದಕ್ಕೆ ಎರಡು ಗ್ರಾಮಸ್ಥರ ವಿರೋಧವಿದೆ. ಹಾಗಾಗಿ ಪ್ರಸ್ತಾವನೆ ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಎರಡೂ ಗ್ರಾಮಗಳ ರೈತರು ಸಣ್ಣ ಹಿಡುವಳಿದಾರರು. ಕೃಷಿಯೇ ಅವರ ಜೀವನದ ಮುಖ್ಯ ಆಧಾರವಾಗಿದೆ. ಈ ಜಮೀನು ಅತ್ಯಂತ ಫಲವತ್ತಾಗಿದ್ದು, ಇಲ್ಲಿ ಜೋಳ, ರಾಗಿ, ಆಲೂಗೆಡ್ಡೆ ಸೇರಿ ವಿವಿಧ ತರಕಾರಿ ಬೆಳೆಯುವುದರ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಅದೇ ಪ್ರಮುಖ ಆದಾಯ ಮೂಲವಾಗಿದೆ. ಜಮೀನಿನಲ್ಲಿ ಬೆಳೆಯುವ ಹುಲ್ಲು ಹಾಗು ಜೋಳ ಪಶುಗಳಿಗೆ ಆಹಾರವಾಗಿ ಹಾಲು ಉತ್ಪಾದನೆಗೆ ಸಹಕಾರಿ ಆಗುತ್ತಿದೆ. ಹೈನುಗಾರಿಕೆ ಹಾಗು ಕೃಷಿ ಆದಾಯದಿಂದಲೇ ರೈತರು, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ, ಚಿಕಿತ್ಸೆ ಹಾಗು ಕುಟುಂಬದ ದಿನನಿತ್ಯದ

» ನಾಲ್ಕನೇ ಪುಟದಲ್ಲಿ

# ಸರ್ಕಾರದ ಯೋಜನೆ ತಿಳಿಸಿ ಮತಗಳಾಗಿ ಪರಿವರ್ತಿಸಿ

## ಕಾಂಗ್ರೆಸ್ ಕಾರ್ಯಕರ್ತರಿಗೆ ಮಾಜಿ ಸಚಿವ ಬಿ.ಶಿವರಾಮ್ ಕರೆ

• ಪ್ರಜೋದಯ ವರದಿ

**ಜಾವಗಲ್:** ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಹಾಗು ನೀರಾವರಿ, ಶಿಕ್ಷಣ, ಕೃಷಿ, ಕಂದಾಯ, ಆರೋಗ್ಯ ಸೇರಿ ವಿವಿಧ ಜನಪರ ಪ್ರಗತಿದಾಯಕ ಕಾರ್ಯಕ್ರಮಗಳ ಬಗ್ಗೆ ಕಾರ್ಯಕರ್ತರು ಹಾಗು ಬೂತ್ ಮಟ್ಟದ ಏಜೆಂಟ್‌ರು ಜನಸಾಮಾನ್ಯರಲ್ಲಿ ಅರಿವು ಮೂಡಿಸಿ ಅವುಗಳನ್ನು ಮತಗಳಾಗಿ ಪರಿವರ್ತಿಸುವ ಕೆಲಸ ಮಾಡಬೇಕೆಂದು ಮಾಜಿ ಸಚಿವ ಬಿ.ಶಿವರಾಮ್ ಅವರು ಕರೆ ನೀಡಿದರು.

ಪಟ್ಟಣದಲ್ಲಿ ಜಾವಗಲ್-ಹಳೇಬೀಡು ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ಹಮ್ಮಿಕೊಂಡಿದ್ದ ಹೋಬಳಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ಹಾಗು ನಿರ್ಗಮಿತ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ವಿ.ಎಸ್.ಎಸ್.ಎನ್ ನಿರ್ದೇಶಕರು ಮತ್ತು ಸಿ.ಎಲ್.ಇ. ಗಳ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರಿಗೆ ನೀಡಿರುವ ಉಚಿತ ಬಸ್ ಪ್ರಯಾಣ ಯೋಜನೆಯಿಂದ ಬೇಲೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇದುವರೆಗೆ ಸುಮಾರು 1 ಕೋಟಿ 10 ಲಕ್ಷ ಮಹಿಳೆಯರು ಪ್ರಯಾಣಿಸಿರುವುದು ಸರ್ಕಾರದ ಜನಪರ ಬದ್ಧತೆಯನ್ನು ತೋರಿಸುತ್ತದೆ ಎಂದರು.

ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಜನಸಾಮಾನ್ಯರ ಮೂಲಸೌಕರ್ಯಗಳ ಕೊರತೆ ನಿವಾರಿಸುವ ನಿಟ್ಟಿನಲ್ಲಿ 133 ಕೋ.ರೂ. ವೆಚ್ಚದಲ್ಲಿ ಎಂ.ಯು.ಎಸ್.ಎಸ್ ಕೇಂದ್ರಗಳ ಮಂಜೂರಾತಿ, ಎತ್ತಿನಹೊಳೆ ನೀರಾವರಿ ಯೋಜನೆ, ಸಂತ್ರಸ್ತರಿಗೆ ಪರಿಹಾರ ವಿತರಣೆ, ನೀಲಗಿರಿ ಕಾವಲ್ ಹಾಗು ಅತ್ತಿಗುಡ್ಡ ಕಾವಲ್ ಪ್ರದೇಶಗಳ ರೈತರ ಸಮಸ್ಯೆ ಪರಿಹಾರಕ್ಕೆ ಕ್ರಮ ಸೇರಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಪ್ರಾಮಾಣಿಕವಾಗಿ ಕೈಗೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ಜಿ.ಬಿ.ಶಶಿಧರ್ ಅವರು ಮಾತನಾಡಿ, ಕಾಂಗ್ರೆಸ್ ಜನಸೇವೆಯ ಪರಂಪರೆ ಹೊಂದಿರುವ ಪಕ್ಷವಾಗಿದೆ. ಚುನಾವಣೆ ಸಂದರ್ಭದಲ್ಲಿ ಬೇರೆ ಪಕ್ಷಗಳ ಆಮಿಷಗಳಿಗೆ ಒಳಗಾಗದೆ ಪಕ್ಷದ ಗೆಲುವಿಗಾಗಿ ನಿಷ್ಠೆಯಿಂದ ಕೆಲಸ ಮಾಡಬೇಕು. ಸರ್ಕಾರದ ಸಾಧನೆಗಳನ್ನು ಜನಸಾಮಾನ್ಯರಿಗೆ ತಿಳಿಸುವುದು ಕಾರ್ಯಕರ್ತರ ಕರ್ತವ್ಯ ಎಂದು ಹೇಳಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಾಣಿ ಆನಂದ್ ಮಾತನಾಡಿ, ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಗ್ಯಾರಂಟಿ ಯೋಜನೆಗಳ ಸಮರ್ಪಕ ಜಾರಿಯಿಂದ ಪ್ರತಿ ಕುಟುಂಬಕ್ಕೂ ತಿಂಗಳಿಗೆ ಸರಾಸರಿ 6 ರಿಂದ 8 ಸಾವಿರ ರೂ.ಗಳಷ್ಟು ಆರ್ಥಿಕ ಲಾಭ ದೊರೆಯುತ್ತಿದೆ ಎಂದು ಹೇಳಿದರು. ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಜೆ.ಎಸ್.ಶ್ರೀಕಂಠಯ್ಯ, ಮುಖಂಡರಾದ ಬೇಲೂರು ಸಂತೋಷ್, ಬೆಳುವಳ್ಳಿ ಮಹಾದೇವಪ್ಪ, ಮಹಾಲಿಂಗಪ್ಪ, ಕಲ್ಲಹಳ್ಳಿ ನಾಗರಾಜು, ಸಂಕೀಹಳ್ಳಿ ಮಲ್ಲಿಕಾರ್ಜುನ, ಮಾಕು ಚಂದ್ರಶೇಖರ್, ಬಸವರಾಜು, ವಿಜಯ್ ಕುಮಾರ್, ರೇಖಾ ಜಯಣ್ಣ, ರಂಗಸ್ವಾಮಿ, ಲಕ್ಷ್ಮಿ ರವಿಶಂಕರ್, ಕೊಪ್ಪಲು ಗಣೇಶ, ಗಿರೀಗೌಡ, ಶರತ್ ಇತರರಿದ್ದರು.



# ಸನ್ಯಾಸಿಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ

## ಅಧಿಕಾರಿಗಳು, ಜನಪ್ರತಿನಿಧಿಗಳ ವಿರುದ್ಧ ಗ್ರಾಮಸ್ಥರ ಆಕ್ರೋಶ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಸನ್ಯಾಸಿಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಉಂಟಾಗಿದ್ದು, ಗ್ರಾಮಸ್ಥರು ದೈನಂದಿನ ಜೀವನ ಸಾಗಿಸಲು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ.

ಗ್ರಾಮದಲ್ಲಿ ನೀರಿನ ಸರಬರಾಜಿಲ್ಲದ ಕಾರಣ ಸ್ಥಳೀಯರು ಎರಡು ಕಿಲೋ ಮೀಟರ್ ದೂರದಿಂದ ಕುಡಿಯುವ ನೀರನ್ನು ತರಬೇಕಾದ ದುಸ್ಥಿತಿ

» ನಾಲ್ಕನೇ ಪುಟದಲ್ಲಿ



### ಡಿಸಿ ಕಚೇರಿ ಎದುರು ಪ್ರತಿಭಟನೆ ಎಚ್ಚರಿಕೆ

ಕುಡಿಯುವ ನೀರಿನ ಸಮಸ್ಯೆಯನ್ನು ಶೀಘ್ರವೇ ಬಗೆಹರಿಸಬೇಕು. ಇಲ್ಲವಾದರೆ ಗ್ರಾಮಸ್ಥರು ಎಲ್ಲರೂ ಸೇರಿ ಖಾಲಿ ಕೊಡಗಳನ್ನು ಹಿಡಿದು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದೆಂದು ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

## 26 ಜಿಲ್ಲೆಗಳಲ್ಲಿ ಜಿಡಿಪಿ ಕುಸಿತ : ಆರ್.ಅಶೋಕ್

• ಪ್ರಜೋದಯ ವರದಿ

**ಬೆಂಗಳೂರು :** ರಾಜ್ಯದ 26 ಜಿಲ್ಲೆಗಳ ತಲಾ ಆದಾಯ ರಾಜ್ಯದ ಸರಾಸರಿ ತಲಾ ಆದಾಯಕ್ಕಿಂತ ಕೆಳಗಿರುವುದು ಪ್ರಾದೇಶಿಕ ಅಸಮಾನತೆ ಎಷ್ಟು ಗಂಭೀರವಾಗಿದೆ ಎಂಬುದಕ್ಕೆ ಕನ್ನಡಿ ಹಿಡಿದಂತಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ತಿಳಿಸಿದ್ದಾರೆ.

ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯದ 31 ಜಿಲ್ಲೆಗಳ ಪೈಕಿ ಕೇವಲ 5 ಜಿಲ್ಲೆಗಳು ಸರಾಸರಿ ತಲಾದಾಯಕ್ಕಿಂತ ಹೆಚ್ಚು ತಲಾದಾಯ ಹೊಂದಿವೆ ಎಂದಿದ್ದಾರೆ.

# ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಪತ್ನಿ ಕೊಲೆ

## ಆಸ್ತಿ ವಿಚಾರವಾಗಿ ಕಲಹ : ಪತಿಯಿಂದ ದುಷ್ಕೃತ್ಯ

• ಪ್ರಜೋದಯ ವರದಿ

**ಆಲೂರು:** ಆಸ್ತಿ ವಿಚಾರವಾಗಿ ನಡೆದ ಕಲಹ ವಿಕೋಪಕ್ಕೆ ತಿರುಗಿ ಗಂಡನೇ ಹೆಂಡತಿಗೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ ಭೀಕರ ಘಟನೆ ತಾಲ್ಲೂಕಿನ ಸಿಂಗಟಗೆರೆ ಗ್ರಾಮದಲ್ಲಿ ಭಾನುವಾರ ಮಧ್ಯರಾತ್ರಿ ನಡೆದಿದೆ.

ಗ್ರಾಮದ ಸುಮಿತ್ರ (50) ಮೃತ ದುರ್ದೈವಿ. ಪತ್ನಿಯನ್ನು ಬೆಂಕಿ ಹಚ್ಚಿ ಕೊಲೆ ಮಾಡಿದ ಆರೋಪದ ಮೇಲೆ ಪತಿ ಚಂದ್ರಾಚಾರ್ ಅವರನ್ನು ಪೊಲೀಸರು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ. ಮೃತ ಸುಮಿತ್ರ ಹಾಗು ಅವರ ಸಹೋದರಿಯರು ತಮ್ಮ ತವರು ಮನೆಯಲ್ಲಿ ಆಸ್ತಿ ಹಂಚಿಕೆ ವಿಚಾರವಾಗಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಈ ವಿಚಾರವಾಗಿ ಸುಮಿತ್ರ ಅವರ ಕುಟುಂಬದಲ್ಲಿ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ಚಂದ್ರಾಚಾರ್ ಮದ್ಯಪಾನ ಮಾಡಿ ಮನೆಗೆ ಬಂದು ಹೆಂಡತಿಯೊಂದಿಗೆ ಜಗಳವಾಡುತ್ತಿದ್ದರೆಂದು ಹೇಳಲಾಗಿದೆ. ಭಾನುವಾರ ರಾತ್ರಿ ಸುಮಾರು 10 ಗಂಟೆ ವೇಳೆಗೆ ಮದ್ಯದ ಅಮಲಿನಲ್ಲಿ ಮನೆಗೆ ಬಂದ ಅವರು ಸುಮಿತ್ರ ಅವರೊಂದಿಗೆ ವಾಗ್ವಾದ ನಡೆಸಿದ್ದರು.

ಈ ದಂಪತಿಗೆ ಶಿವರಾಜ್ ಎಂಬ ಪುತ್ರನಿದ್ದು, ಆತ ಮದುವೆಯಾಗಿ ಪತ್ನಿ ಚೈತ್ರ ಅವರೊಂದಿಗೆ ತಂದೆ-ತಾಯಿಯ ಜೊತೆಗೆ ವಾಸವಾಗಿದ್ದಾನೆ. ತಂದೆ-ತಾಯಿ ನಡುವೆ ಜಗಳ ನಡೆಯುತ್ತಿದ್ದ ಸಂದರ್ಭದಲ್ಲಿ ಪುತ್ರ ಶಿವರಾಜ್ ಇಬ್ಬರಿಗೂ ಸಮಾಧಾನ ಪಡಿಸಿ ರಾತ್ರಿ ಮಲಗಲು ತೆರಳಿದ್ದಾನೆ.

» ಮೂರನೇ ಪುಟದಲ್ಲಿ

## ಪ್ರಾಂಶುಪಾಲರ ಮುಂಬಡ್ತಿ ಪ್ರಕ್ರಿಯೆ ಶೀಘ್ರ ಆರಂಭ

• ಪ್ರಜೋದಯ ವರದಿ

**ಬೆಂಗಳೂರು :** ಖಾಲಿ ಇರುವ ಹಾಗೂ ಮುಂಬರುವ 6 ತಿಂಗಳಲ್ಲಿ ಖಾಲಿಯಾಗಲಿರುವ ಪ್ರಾಂಶುಪಾಲರ ಹುದ್ದೆಗಳಿಗೆ ಮುಂಬಡ್ತಿ ನೀಡುವ ಪ್ರಕ್ರಿಯೆಯನ್ನು ಶೀಘ್ರವಾಗಿ ಕೈಗೊಳ್ಳಲಾಗುವುದೆಂದು ಶಾಲಾ ಶಿಕ್ಷಣ ಸಚಿವ ಮಧುಬಂಗಾರಪ್ಪ ಅವರು ಮೇಲ್ಮನೆಯಲ್ಲಿ ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ (ಸರ್ಕಾರಿ ಪದವಿ ಪೂರ್ವ ಕಾಲೇಜು) ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಉಪನ್ಯಾಸಕರಿಂದ ವ್ಯಕ್ತಿ ಪೂರ್ವೋತ್ತರ ದಸ್ತಾವೇಜುಗಳು ನಿರ್ದೇಶನಾಲಯದಲ್ಲಿ ಸ್ವೀಕೃತವಾಗಿದ್ದು, ಅವುಗಳು ಪರಿಶೀಲನೆಯ ಹಂತದಲ್ಲಿವೆ ಎಂದು ಕಾಂಗ್ರೆಸ್‌ನ ಶ್ರೀನಿವಾಸ್ ಅವರ ಪ್ರಶ್ನೆಗೆ ಉತ್ತರ ನೀಡಿದರು.

ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಉಪನ್ಯಾಸಕರ ವೃಂದದ ಕರಡು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಅದಕ್ಕೆ ಸ್ವೀಕೃತವಾದ 461 ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸಲಾಗುತ್ತಿದೆ ಎಂದು ಹೇಳಿದರು.

## ಮಹಿಳಾ ದಿನಾಚರಣೆಯಲ್ಲಿ ಪುರುಷರೇಕೆ ಭಾಗವಹಿಸುತ್ತಿಲ್ಲ: ಜಿಲ್ಲಾಧಿಕಾರಿ ಪ್ರಶ್ನೆ

# ಮಹಿಳಾ ಸಬಲೀಕರಣಕ್ಕೆ ಪುರುಷರೂ ಜಾಗೃತರಾಗಬೇಕು

• ಪ್ರಜೋದಯ ವರದಿ

**ಹಾಸನ:** ಮಹಿಳೆಯರ ಹಕ್ಕುಗಳು, ಸಮಾನತೆ ಮತ್ತು ಗೌರವ ಕುರಿತು ಪುರುಷರು ಕೂಡ ಸಮಾನವಾಗಿ ಜಾಗೃತರಾಗಬೇಕು. ಮಹಿಳಾ ದಿನಾಚರಣೆ ಕೇವಲ ಮಹಿಳೆಯರು ಮಾತ್ರ ಆಚರಿಸುವ ಕಾರ್ಯಕ್ರಮ ಆಗಿರಬಾರದು. ಪುರುಷರೂ ಸಮಾನವಾಗಿ ಭಾಗವಹಿಸಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೋಮವಾರ ಅಂತರ್‍ರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳಾ ದಿನಾಚರಣೆಯಲ್ಲಿ ಪುರುಷರೇಕೆ ಭಾಗವಹಿಸಬಾರದು. ಅವರಿಗೆ ತಾಯಿ, ಸಹೋದರಿ, ಪತ್ನಿ ಅಥವಾ ಮಗಳಿಲ್ಲವೇ, ಮಹಿಳೆಯರ ಸಮಸ್ಯೆ ಅರ್ಥ ಮಾಡಿಕೊಳ್ಳಲು ಪುರುಷರೂ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು. ಮುಂದಿನ ದಿನಗಳಲ್ಲಿ ಮಹಿಳಾ ದಿನಾಚರಣೆಯಲ್ಲಿ ಎಲ್ಲಾ ಇಲಾಖೆ ಅಧಿಕಾರಿಗಳು ಹಾಗು ಪುರುಷ ಸಿಬ್ಬಂದಿ ಭಾಗವಹಿಸಬೇಕೆಂದು ತಾಕೀತು ಮಾಡಿದರು.

ಮಹಿಳೆಯರು ಪ್ರಕೃತಿ ದತ್ತವಾಗಿ ಹೇಗಿದ್ದರೂ, ಅವರನ್ನು ಗೌರವಿಸುವ ಮನೋ ಭಾವನೆ ಬೆಳೆಸಿಕೊಳ್ಳಬೇಕು. ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಸ್ವಾವಲಂಬನೆ ಮತ್ತು ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯ ದೊರೆತಾಗ ಮಾತ್ರ ಸಮಾಜ ಸಮತೋಲನದ ದಾರಿಯಲ್ಲಿ ಸಾಗುತ್ತದೆ. ಮಹಿಳಾ ಸಬಲೀಕರಣ ಕೇವಲ ಮಹಿಳೆಯರ ವಿಷಯವಲ್ಲ, ಅದು ಸಮಗ್ರ ಸಮಾಜದ ಅಭಿವೃದ್ಧಿಗೆ ಅಗತ್ಯವೆಂದು ಹೇಳಿದರು.

ಸಂವಿಧಾನದಲ್ಲಿ ಮಹಿಳೆಯರಿಗೆ ನೀಡಿರುವ ಸಮಾನತೆ ಕೇವಲ ಕಾನೂನಿನಲ್ಲೇ ಉಳಿಯದೆ ಸಮಾಜದಲ್ಲಿಯೂ ಕಾಣಬೇಕು. ಮಹಿಳೆಯರ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಎಲ್ಲರ ಜವಾಬ್ದಾರಿ. ಇದಕ್ಕೆ ಪುರುಷರ ಸಹಕಾರ ಅತ್ಯಂತ ಮುಖ್ಯ ಎಂದ ಅವರು, ಮಹಿಳೆಯರ ದೈಹಿಕ ರೂಪದ ಬಗ್ಗೆ ಟೀಕೆ ಮಾಡುವುದು, ಕಪ್ಪು, ದಪ್ಪ, ಸಣ್ಣ ಹೀಗೆ ಅವಮಾನಿಸುವುದು ಮಾನಸಿಕ ದೌರ್ಜನ್ಯಕ್ಕೆ ಸಮಾನ. ಇಂತಹ ಮನೋಭಾವನೆಗಳನ್ನು ಸಮಾಜದಿಂದ ದೂರ ಮಾಡಬೇಕಿದೆ ಎಂದರು.

18 ವರ್ಷ ತುಂಬದ ಯುವತಿ ಚಲನಾ ಪರವಾನಗಿ ಇಲ್ಲದೆ ಬೈಕ್ ಚಾಲನೆ ಮಾಡುವಾಗ ಅಪಘಾತದಿಂದ ಮೃತಪಟ್ಟಳು. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಕಾರಣವಾಗಿತ್ತು. ಕೆಲವರು ಹುಡುಗಿಗೆ ಬೈಕ್ ಏಕೆ ಬೇಕಿತ್ತು ಎಂದು ಪ್ರಶ್ನಿಸಿ ಟೀಕೆ ಮಾಡಿರುವುದು ನೋವು ತಂದಿದೆ. ಇದೇ ರೀತಿಯ ಅಪಘಾತ ಹುಡುಗರಿಂದಲೂ ಆಗುತ್ತವೆ. ಹಲವು ಇಂತಹದೇ ದುರಂತ ಘಟಿಸಿವೆ. ಆದರಾಗ ಅಷ್ಟು ಟೀಕೆ ಕೇಳಿಬರುವುದಿಲ್ಲ. ಹೆಣ್ಣುಮಕ್ಕಳು ವಾಹನ ಚಾಲನೆ ಮಾಡಿದಾಗ ಮಾತ್ರ ಪ್ರಶ್ನಿಸುವುದು ಸಮಾಜದಲ್ಲಿ ಲಿಂಗ ಅಸಮಾನತೆ ತೋರಿಸುತ್ತದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಕೆ.ದಾಕ್ಷಾಯಿಣಿ ಅವರು ಮಾತನಾಡಿ, ಮಹಿಳೆಯರು ನಾಲ್ಕು ಗೋಡೆಗಳ ಒಳಗೆ ಮಾತ್ರ ಸೀಮಿತವಲ್ಲ, ಸ್ವತಂತ್ರವಾಗಿ ಎಲ್ಲಾ ಕ್ಷೇತ್ರದಲ್ಲೂ ಕೂಡ ಕಾರ್ಯನಿರ್ವಹಿಸಬಹುದು. ಆಡು ಮುಟ್ಟದ ಸೊಪ್ಪಿಲ್ಲವೆಂದು ಹೇಳುತ್ತಾರೋ ಹಾಗೆಯೇ ಹೆಣ್ಣು ಅಲಂಕರಿಸದ ಅಧಿಕಾರವಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಮಹಿಳೆಯರನ್ನು ಕಾಣಬಹುದು. ಪ್ರತಿಯೊಂದು ಹೆಣ್ಣು ಮಕ್ಕಳು ಕೂಡ ಆರ್ಥಿಕವಾಗಿ ಸಬಲೀಕರಣವಾಗಬೇಕೆಂದು ಸರ್ಕಾರ ಅನೇಕ ರೀತಿಯ ಯೋಜನೆಗಳನ್ನು ಜಾರಿಗೆ ತಂದಿತು, ಆದ್ದರಿಂದ ಸಮಾಜದಲ್ಲಿ ಪ್ರತಿಯೊಂದು ಹೆಣ್ಣುಮಗು ಆರ್ಥಿಕವಾಗಿ ಸಬಲೀಕರಣವಾಗಿರುವುದನ್ನು ಕಾಣಬಹುದೆಂದು ತಿಳಿಸಿದರು.

ಸಾಹಿತಿ ಶೈಲಜಾ ಹಾಸನ ಅವರು ಮಾತನಾಡಿ, ಹೆಣ್ಣು ಮಕ್ಕಳಿಗೆ ಸಮಾನವಾಗಿ ನಿಲ್ಲುವವರು ಯಾರು ಕೂಡ ಇಲ್ಲ, ಸಮಾಜದಲ್ಲಿ ಹೆಣ್ಣು ಮಗುವನ್ನು ಶಕ್ತಿಯ ಸ್ವರೂಪವೆಂದು ಹೇಳಬಹುದು. ಮಹಿಳೆಯರಿಗೆ ಆರ್ಥಿಕವಾದ ಸ್ವಾತಂತ್ರ, ಧಾರ್ಮಿಕ ವಾದ ಸ್ವಾತಂತ್ರ ಹೀಗೆ ಪ್ರತಿಯೊಂದು ಸ್ವಾತಂತ್ರವೂ ಕೂಡ ದೊರೆಯುತ್ತಿದೆ. ಆದರಿಂದ ಹೆಣ್ಣು ಸಮಾಜದಲ್ಲಿ ಬದುಕಲು ಸಾಧ್ಯವಾಗುತ್ತಿದೆ. ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳು ಹಲವು ರೀತಿಯ ಅನಿಷ್ಟ ಪದ್ಧತಿಗಳಿಗೆ ಒಳಗಾಗುತ್ತಿದ್ದರು, ಆದರೂ ಕೂಡ ಅಂತಹ ಪದ್ಧತಿಗಳನ್ನೆಲ್ಲ ದಾಟಿ ಸಮಾಜದಲ್ಲಿ ಪುರುಷರಷ್ಟೇ ಸಮಾನರಾಗಿದ್ದೇವೆಂದು ಸಾಧನೆ ಮೂಲಕ ತೋರಿಸಿದ್ದಾರೆಂಬುದು ಹೆಮ್ಮೆ ತರುವಂತಹ ವಿಷಯವೆಂದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ, ಜಿಲ್ಲಾ ಕಾರ್ಮಿಕ ಅಧಿಕಾರಿ ಕೆ.ಎನ್. ಯಮುನ, ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟದ ಅಧ್ಯಕ್ಷೆ ವೈ.ಆರ್.ಭಾರತಿ, ಜಿಲ್ಲಾ ಉದ್ಯೋಗಾಧಿಕಾರಿ ವಿಜಯಲಕ್ಷ್ಮಿ ಮತ್ತಿತರರಿದ್ದರು.



**ಹೆಣ್ಣುಮಕ್ಕಳಿಗೆ ಸಮಾಜ ಹಲವು ನಿರ್ಬಂಧ ವಿಧಿಸುತ್ತಿದೆ. ಅವರಿಗೆ ಸ್ವಾತಂತ್ರ್ಯ ನೀಡಿದರೆ ಜವಾಬ್ದಾರಿಯುತವಾಗಿ ಯೋಚಿಸಿ ಉತ್ತಮ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಹೊಂದಿದ್ದಾರೆ. ಪುರುಷರಂತೆ ಮಹಿಳೆಯರಲ್ಲಿಯೂ ಸಮಾನ ಶಕ್ತಿ ಮತ್ತು ಬುದ್ಧಿಮತ್ತೆ ಇದೆ. ಆದರೆ, ಪುರುಷ ಪ್ರಧಾನ ಸಮಾಜ ಅದನ್ನು ಒಪ್ಪಿಕೊಳ್ಳಲು ಇನ್ನೂ ಸಿದ್ಧವಾಗಿಲ್ಲವೆಂಬುದು ವಿಷಾದಕರ.**
**-ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

## ಮಾ.13ರಂದು ಮಾರಮ್ಮ ಜಾತ್ರೆ-ನಾಟಕ ಪ್ರದರ್ಶನ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಕಟ್ಟಾಯ ಹೋಬಳಿ ಸತ್ತಿಗರಹಳ್ಳಿ ಕೊಪ್ಪಲು ಗ್ರಾಮದಲ್ಲಿ ಮಾರಮ್ಮ ಜಾತ್ರೆ ಮತ್ತು ತ್ರಿಜನ್ಮ ಮೋಕ್ಷ ಪೌರಾಣಿಕ ನಾಟಕ ಪ್ರದರ್ಶನ ಮಾ.13ರಂದು ನಡೆಯಲಿದೆ ಎಂದು ಗ್ರಾಮದ ಮುಖಂಡ ದೇಗುಂದೇಗೌಡ ಅವರು ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತ್ರಾ ಮಹೋತ್ಸವದ ಅಂಗವಾಗಿ ಅಂದು ರಾತ್ರಿ 8.30ಕ್ಕೆ ಶ್ರೀ ಮಾರಮ್ಮ ಅವರ ಕೃಪಾ ಪೋಷಿತ ನಾಟಕ ಮಂಡಳಿ, ಶ್ರೀ ಆದಿಚುಂಚನಗಿರಿ ಕಾಲಭೈರವೇಶ್ವರ ಯುವಕರ ಸಂಘ ಸತ್ತಿಗರಹಳ್ಳಿ ಕೊಪ್ಪಲು ಆಶ್ರಯದಲ್ಲಿ ತ್ರಿಜನ್ಮ ಮೋಕ್ಷ ಅಥವಾ ಜಯ ವಿಷಯದ ಶಾಪ ವಿಮೋಚನೆ ನಾಟಕ ಪ್ರದರ್ಶನ ಇದೆ ಎಂದರು.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ನಾಟಕ ಪ್ರದರ್ಶನಕ್ಕೆ ಚಾಲನೆ ನೀಡುವರು. ಶಾಸಕ ಸಿಮೆಂಟ್ ಮಂಜು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಪಟೇಲ್, ಎಂಎಲ್‌ಸಿ ಡಾ.ಸೂರಜ್ ರೇವಣ್ಣ, ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಭಾಗವಹಿಸುವರು.

# ಮಹಿಳಾ ಸಬಲೀಕರಣ - ಮಕ್ಕಳ ಕಲ್ಯಾಣದ ಕಿರುನೋಟ

ಪಕ್ಷಿನೋಟ
ರಾಜ್ಯ ಸರಕಾರವು 2007-08ರಿಂದಲೇ ಮಹಿಳಾ ಉದ್ದೇಶಿತ ಆಯವ್ಯಯ ಮಂಡಿಸುವ ಮೂಲಕ ಮಹಿಳೆಯರಿಗಾಗಿ ಪ್ರತ್ಯೇಕ ಅನುದಾನ ಮೀಸಲಿಡುತ್ತಿರುವುದು ವಿಶೇಷ. ಮಹಿಳೆಯರು ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರಕಾರ ಜಾರಿಗೆ ತಂದಿರುವ ಈ ಯೋಜನೆಗಳು ಸಮಾಜದಲ್ಲಿ ಸಬಲೀಕರಣ ಮತ್ತು ಸಮಾನತೆಯತ್ತ ಮಹತ್ವದ ಹೆಜ್ಜೆಯಾಗಿವೆ.

ಅಂತಾರಾಷ್ಟ್ರೀಯ ಮಹಿಳಾ ದಿನದ ಆಚರಣೆ ಮೊನ್ನೆಯಷ್ಟೇ (ಮಾ.8) ಮುಗಿದಿದೆ. ಈ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಮಹಿಳೆಯರಿಗೂ ಶುಭಾಶಯಗಳು. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ.49.1ರಷ್ಟು ಮಹಿಳೆಯರಿದ್ದಾರೆ. ಮಹಿಳೆಯರ ಮತ್ತು ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಸರಕಾರವು ಹಲವಾರು ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೆ ತಂದಿದೆ. ಪೌಷ್ಟಿಕ ಆಹಾರದಿಂದ ಹಿಡಿದು ಆರ್ಥಿಕ ಸ್ವಾವಲಂಬನೆಯವರೆಗೆ ಪ್ರತಿಯೊಂದು ಹಂತದಲ್ಲೂ ಮಹಿಳೆಯರನ್ನು ಸಶಕ್ತಗೊಳಿಸುವುದು ಸರಕಾರದ ಮುಖ್ಯ ಗುರಿಯಾಗಿದೆ. ಇದನ್ನು ಹಂಚಿಕೊಳ್ಳುವ ಪ್ರಯತ್ನವಾಗಿದೆ ಈ ಲೇಖನ.

ರಾಜ್ಯ ಸರಕಾರವು 2007-08ರಿಂದಲೇ ಮಹಿಳಾ ಉದ್ದೇಶಿತ ಆಯವ್ಯಯ ಮಂಡಿಸುವ ಮೂಲಕ ಮಹಿಳೆಯರಿಗಾಗಿ ಪ್ರತ್ಯೇಕ ಅನುದಾನ ಮೀಸಲಿಡುತ್ತಿರುವುದು ವಿಶೇಷ.

ಮಹಿಳೆಯರು ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರಕಾರ ಜಾರಿಗೆ ತಂದಿರುವ ಈ ಯೋಜನೆಗಳು ಸಮಾಜದಲ್ಲಿ ಸಬಲೀಕರಣ ಮತ್ತು ಸಮಾನತೆಯತ್ತ ಮಹತ್ವದ ಹೆಜ್ಜೆಯಾಗಿವೆ.

### 1. ರಾಜ್ಯದ ಪ್ರಮುಖ ಗ್ಯಾರಂಟಿ ಯೋಜನೆಗಳು

**ಗೃಹಲಕ್ಷ್ಮಿ ಯೋಜನೆ:** ಮಹಿಳೆಯರ ಆರ್ಥಿಕ ಸ್ಥಿತಿಗತಿ ಸುಧಾರಿಸಲು ಮನೆಯ ಯಜಮಾನಿಗೆ ಪ್ರತಿ ತಿಂಗಳು 2000 ರು.ಗಳನ್ನು ನೇರವಾಗಿ ಡಿಬಿಟಿ ಮೂಲಕ ಜಮೆ ಮಾಡಲಾಗುತ್ತಿದೆ. ಈಗಾಗಲೇ 1.24 ಕೋಟಿ ಫಲಾನುಭವಿಗಳಿಗೆ ಒಟ್ಟು 42,345 ಕೋಟಿ ರು.ಗಳನ್ನು ನೀಡಲಾಗಿದೆ.

**ಶಕ್ತಿ ಯೋಜನೆ:** ಇದು ಮಹಿಳೆಯರಿಗೆ ರಾಜ್ಯದೊಳಗೆ ಸರಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯವನ್ನು ಒದಗಿಸುತ್ತದೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ಎಲ್ಲಾ ನಿಗಮಗಳ ಸಾಮಾನ್ಯ ಬಸ್‌ಗಳಲ್ಲಿ ಮಹಿಳೆಯರು, ವಿದ್ಯಾರ್ಥಿನಿಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಉಚಿತವಾಗಿ ಸಂಚರಿಸಬಹುದು. ಇದು ಉದ್ಯೋಗ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿನ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸಿದೆ.

### 2. ಪೌಷ್ಟಿಕಾಂಶ ಮತ್ತು ಆರೋಗ್ಯಕ್ಕೆ ಆದ್ಯತೆ

ಮಹಿಳೆಯರ ಹಾಗೂ ಮಕ್ಕಳ ಅಪೌಷ್ಟಿಕತೆ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ. ಅಪೌಷ್ಟಿಕತೆಯನ್ನು ಹೋಗಲಾಡಿಸಲು ಸರಕಾರ ವಿವಿಧ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ:

**ಪೌಷ್ಟಿಕ ಆಹಾರ:** 06 ತಿಂಗಳಿಂದ 06 ವರ್ಷದ ಮಕ್ಕಳಿಗೆ 500 ಕ್ಯಾಲೊರಿ, 12-15 ಗ್ರಾಂ ಪ್ರೋಟೀನ, ಗರ್ಭಿಣಿ ಮತ್ತು ಬಾಣಂತಿಯರಿಗೆ ಹಾಗೂ ಪ್ರಾಯಪೂರ್ವ ಬಾಲಕಿಯರಿಗೆ 600 ಕ್ಯಾಲೋರಿ, 18-20 ಗ್ರಾಂ ಪ್ರೋಟೀನ್ ಹಾಗೂ ತೀವ್ರ ಅಪೌಷ್ಟಿಕ ಮಕ್ಕಳಿಗೆ 800 ಕ್ಯಾಲೋರಿ, 20-25 ಗ್ರಾಂ ಪ್ರೋಟೀನ್‌ಯುಕ್ತ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ.

**ಮಾತೃಪೂರ್ಣ ಯೋಜನೆ:** ಗರ್ಭಿಣಿ ಮತ್ತು ಬಾಣಂತಿಯರಿಗೆ 600 ಕ್ಯಾಲೋರಿ, 18-20 ಗ್ರಾಂ ಪ್ರೋಟೀನ್ ಒಳಗೊಂಡ ಬಿಸಿಯೂಟ, ಹಾಲು ಮತ್ತು ಮೊಟ್ಟೆಯನ್ನು ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರು. 21ರ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ. 2025-26ನೇ ಸಾಲಿನಲ್ಲಿ ಸುಮಾರು 3,87,191 ಗರ್ಭಿಣಿಯರು ಮತ್ತು 3,42,230 ಬಾಣಂತಿ ಮಹಿಳೆಯರು ಇದರ ಲಾಭ ಪಡೆದಿದ್ದಾರೆ.

**ಸೃಷ್ಟಿ ಮತ್ತು ಕ್ಷೀರಭಾಗ್ಯ:** ಸೃಷ್ಟಿ ಯೋಜನೆಯಡಿ 03 ವರ್ಷದಿಂದ 06 ವರ್ಷದ ಎಲ್ಲಾ ಸಾಮಾನ್ಯ ಮಕ್ಕಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆ (ರು. 6ರ ದರದಲ್ಲಿ) ಹಾಗೂ ವಾರದಲ್ಲಿ ಎರಡು ದಿನ ಮೊಟ್ಟೆ (ರು. 6ರ ದರದಲ್ಲಿ) ಹಾಗೂ ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ ಐದು ದಿನ 150 ಎಂ.ಎಲ್. ಕೆನೆಭರಿತ ಹಾಲು ಹಾಗೂ 05 ಗ್ರಾಂ ಸಕ್ಕರೆ ನೀಡಲಾಗುತ್ತಿದೆ. ಅಪೌಷ್ಟಿಕತೆಯಿಂದ ಬಳಲುವ ಮಕ್ಕಳಿಗೆ ಇನ್ನೂ ಹೆಚ್ಚುವರಿ ಪೌಷ್ಟಿಕ ಆಹಾರ ಹಾಗೂ ಆರೋಗ್ಯ ಆರೈಕೆ ವ್ಯವಸ್ಥೆಯೂ ಇದೆ.

### 3. ಬಾಲಕಿಯರ ಶಿಕ್ಷಣ ಮತ್ತು ಭವಿಷ್ಯ

**ಭಾಗ್ಯಲಕ್ಷ್ಮಿ ಸುಕನ್ಯಾ ಸಮೃದ್ಧಿ ಯೋಜನೆ:** ಹೆಣ್ಣು ಮಗುವಿನ ಜನನವನ್ನು ಪ್ರೋತ್ಸಾಹಿಸಲು ಮತ್ತು ಲಿಂಗಾನುಪಾತ ಸುಧಾರಿಸಲು ಬಿಪಿಎಲ್ ಕುಟುಂಬಗಳ ಹೆಣ್ಣು ಮಕ್ಕಳಿಗೆ ಆರ್ಥಿಕ ಭದ್ರತೆ ಒದಗಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರು. 26322.00 ಲಕ್ಷಗಳನ್ನು 8,63,190 ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗಿರುತ್ತದೆ.

**ವಸತಿ ನಿಲಯಗಳು:** ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗ ಬಾರದೆಂದು ರಾಜ್ಯಾದ್ಯಂತ ಮೆಟ್ರಿಕ್ ಪೂರ್ವ ಮತ್ತು ನಂತರದ ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ.

**ದೀಪಿಕಾ ವಿದ್ಯಾರ್ಥಿ ವೇತನ:** ಸರಕಾರಿ ಶಾಲಾ ಕಾಲೇಜುಗಳಲ್ಲಿ 10 ಮತ್ತು 12ನೇ ತರಗತಿಗಳನ್ನು ವ್ಯಾಸಂಗ ಮಾಡಿ 2025-26ನೇ ಸಾಲಿನಿಂದ ಉನ್ನತ ಶಿಕ್ಷಣವನ್ನು ಮುಂದುವರಿಸುತ್ತಿರುವ 37000 ವಿದ್ಯಾರ್ಥಿನಿಯರಿಗೆ ವಾರ್ಷಿಕ 30000 ರು.ಗಳ ವಿದ್ಯಾರ್ಥಿ ವೇತನವನ್ನು ಅಜೀಂ ಪ್ರೇಮ್‌ಜಿ ಫೌಂಡೇಷನ್ ವತಿಯಿಂದ ಹಾಗೂ ಉಳಿದ ವಿದ್ಯಾರ್ಥಿನಿಯರಿಗೆ ರಾಜ್ಯ ಸರಕಾರದ ವತಿಯಿಂದ ನೀಡಲಾಗುತ್ತಿದೆ.


### 4. ಆರ್ಥಿಕ ಸ್ವಾವಲಂಬನೆ ಮತ್ತು ಉದ್ಯೋಗ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಮಹಿಳೆಯರನ್ನು ಉದ್ಯಮಿಗಳನ್ನಾಗಿ ಮಾಡಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ:

**ಸ್ವಸಹಾಯ ಸಂಘಗಳು:** ರಾಜ್ಯದಲ್ಲಿ 1.65 ಲಕ್ಷಕ್ಕೂ ಹೆಚ್ಚು ಗುಂಪುಗಳಿದ್ದು, 25 ಲಕ್ಷ ಮಹಿಳೆಯರು ಸಂಘಟಿತರಾಗಿದ್ದಾರೆ. ಮಹಿಳಾ ಉದ್ಯಮಿಗಳಿಗೆ ಗರಿಷ್ಠ 25 ಲಕ್ಷ ರು. ವರೆಗೆ ಸಾಲ ಸೌಲಭ್ಯವಿದೆ.

**ಎಂಎಸ್‌ಐಎಲ್ ಚಿಟ್ ಫಂಡ್ ಯೋಜನೆ:** ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಚಿಟ್ ಫಂಡ್ ಮಹಿಳೆಯರಿಗಾಗಿ, ವಿಶೇಷವಾಗಿ ಗೃಹಲಕ್ಷ್ಮಿ ಫಲಾನುಭವಿಗಳು ಮತ್ತು ಸ್ವಸಹಾಯ ಸಂಘಗಳ (ಎಸ್ ಎಚ್‌ಜಿ) ಸದಸ್ಯರಿಗೆ ಸುರಕ್ಷಿತ ಉಳಿತಾಯ ಮತ್ತು ಹೂಡಿಕೆ ಅವಕಾಶಗಳನ್ನು ಒದಗಿಸುತ್ತದೆ. ಇದು ಕರ್ನಾಟಕ ಸರಕಾರದ ಮಾಲೀಕತ್ವದ ಸಂಸ್ಥೆಯಾಗಿದ್ದು, ಪಾರದರ್ಶಕತೆ, ವಿಶ್ವಾಸಾರ್ಹತೆ ಮತ್ತು ಗ್ರಾಮೀಣ ಭಾಗದ ಜನರನ್ನು ಮೈಕ್ರೋ ಫೈನಾನ್ಸ್ ಶೋಷಣೆಯಿಂದ ರಕ್ಷಿಸುವ ಗುರಿಯನ್ನು ಹೊಂದಿದೆ.

**ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯಗಳು:** ಉದ್ಯೋಗಸ್ಥ ಮಹಿಳೆಯರಿಗೆಂದು 6 ಪ್ರಮುಖ ನಗರಗಳಲ್ಲಿ 23 ವಸತಿ ನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಪ್ರಾರಂಭಿಸಲಾಗಿದೆ. ಗಾರ್ಮೆಂಟ್ಸ್, ಕೈಗಾರಿಕೆಗಳು ಮತ್ತು ಇತರ ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪ ಸಂಖ್ಯಾತ ವರ್ಗದ ದುಡಿಯುವ ಮಹಿಳೆಯರಿಗೆ ಆದ್ಯತೆ ಮೇರೆಗೆ ಸೌಲಭ್ಯ ನೀಡಲಾಗುತ್ತಿದೆ. 2026-27ನೇ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ತಲಾ 50 ಸಂಖ್ಯಾಬಲದ 10 ವಸತಿ ನಿಲಯಗಳನ್ನು ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಬೆಳಗಾವಿ ಮತ್ತು ಕಲಬುರಗಿಯಲ್ಲಿ ಪ್ರಾರಂಭಿಸಲು ಘೋಷಿಸಲಾಗಿದೆ.




**ಕೂಸಿನ ಮನೆ:** ನರೇಗಾ ಅಡಿಯಲ್ಲಿ ಕೆಲಸ ಮಾಡುವ ತಾಯಂದಿರ ಮಕ್ಕಳ ಆರೈಕೆಗಾಗಿ 4000 ಗ್ರಾಮ ಪಂಚಾಯತ್‌ಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಮಹಿಳೆಯರ ಉದ್ಯೋಗ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಗುರಿಯೊಂದಿಗೆ ಈ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, 6 ತಿಂಗಳಿಂದ 3 ವರ್ಷ ವಯಸ್ಸಿನ ಮಕ್ಕಳಿಗೆ ಸುರಕ್ಷತೆ, ಸ್ವಚ್ಛತೆ, ಆರೋಗ್ಯ, ಪೌಷ್ಟಿಕ ಆಹಾರ ಮತ್ತು ಪ್ರಾಥಮಿಕ ಬೆಳವಣಿಗೆಗೆ ಅಗತ್ಯವಾದ ಉತ್ತೇಜನವನ್ನು ಒದಗಿಸಲಾಗುತ್ತದೆ. ಕೆಲಸ ಮಾಡುವ ತಾಯಂದಿರು ತಮ್ಮ ಮಕ್ಕಳ ಆರೈಕೆಯ ಬಗ್ಗೆ ಆತಂಕ ಇಟ್ಟುಕೊಳ್ಳದೆ ಕೆಲಸ ಮಾಡಲು ಇದು ಸಹಾಯಕವಾಗುತ್ತದೆ.

**ಶಿಶು ವಿಹಾರಗಳು:** ರಾಜ್ಯದ ಪ್ರತಿ ಜಿಲ್ಲೆಯ 2 ಸರಕಾರಿ ಕಚೇರಿಗಳಲ್ಲಿ ಮತ್ತು ಪ್ರತಿ ಜಿಲ್ಲೆಯ 2 ತಾಲೂಕುಗಳಲ್ಲಿ ಹೆಚ್ಚು ಮಹಿಳಾ ಸಾಂದ್ರತೆ ಇರುವ ಪ್ರದೇಶಗಳಲ್ಲಿ 123 ಶಿಶುಪಾಲನಾ ಕೇಂದ್ರಗಳನ್ನು ಉದ್ಯೋಗಸ್ಥ ಮಹಿಳೆಯರ ಅನುಕೂಲಕ್ಕಾಗಿ ಪ್ರಾರಂಭಿಸಲಾಗಿದೆ. 2986 ಮಕ್ಕಳು ಈ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ. 2026-27ನೇ ಆಯವ್ಯಯದಲ್ಲಿ 20 ಹೊಸ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲು 1 ಕೋಟಿ ರು. ಅನುದಾನ ನೀಡಲಾಗಿದೆ.

**ಸಂಜೀವಿನಿ:** ಮಹಿಳಾ ಸ್ವಸಹಾಯ ಸಂಘಗಳನ್ನು ಬಲಪಡಿಸುವ ಮತ್ತು ಆ ಮೂಲಕ ಗ್ರಾಮೀಣ ಬಡ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವ ಗುರಿಯನ್ನು ಇದು ಹೊಂದಿದೆ. ಪ್ರಸ್ತುತ, ಈ ಸಂಸ್ಥೆಯು ಕರ್ನಾಟಕ ಸರಕಾರದ ಕೌಶಲಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸುಮಾರು 30 ಲಕ್ಷ ಗ್ರಾಮೀಣ ಮಹಿಳೆಯರನ್ನು ಸಂಘಟಿಸಿ, ಕಿರು ಉದ್ದಿಮೆಗಳನ್ನು ಪ್ರಾರಂಭಿಸಲು ಬೆಂಬಲ ನೀಡಲಾಗುತ್ತಿದೆ.

**ಉದ್ಯೋಗಿನಿ ಯೋಜನೆ:** ಸ್ವಯಂ ಉದ್ಯೋಗಕ್ಕಾಗಿ 1 ರಿಂದ 3 ಲಕ್ಷ ರು.ವರೆಗೆ ಸಾಲ ಮತ್ತು ಸಹಾಯಧನ ನೀಡಲಾಗುತ್ತದೆ.

ಚೇತನ ಯೋಜನೆ: ದಮನಿತ ಮಹಿಳೆಯರ ಪುನರ್ವಸತಿಗಾಗಿ 30,000 ರು. ಪ್ರೋತ್ಸಾಹ ಧನವನ್ನು ನೀಡಲಾಗುತ್ತದೆ.

### 5. ಸುರಕ್ಷತೆ ಮತ್ತು ಸಾಮಾಜಿಕ ರಕ್ಷಣೆ ಅಕ್ಕ ಪಡೆ

ಕಳೆದ ಸಾಲಿನಲ್ಲಿ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ, 2831 ವರದಕ್ಷಿಣೆ ಕಿರುಕುಳ ಪ್ರಕರಣಗಳು ದಾಖಲಾಗಿವೆ ಮತ್ತು 5842 ಲೈಂಗಿಕ ದೌರ್ಜನ್ಯ ಪ್ರಕರಣಗಳು ವರದಿಯಾಗಿವೆ; ಅಪಾಯದಲ್ಲಿರುವ ಅಥವಾ ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳ ತಕ್ಷಣದ ರಕ್ಷಣೆಗಾಗಿ 2025-26ನೇ ಸಾಲಿನಿಂದ ಅಕ್ಕ ಪಡೆಯನ್ನು ಜಾರಿಗೊಳಿಸಲಾಗಿದೆ.

**» ಉದ್ಯೋಗಸ್ಥ ಮಹಿಳೆಯರಿಗೆಂದು 6 ಪ್ರಮುಖ ನಗರಗಳಲ್ಲಿ 23 ವಸತಿನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಪ್ರಾರಂಭಿಸಲಾಗಿದೆ. ಗಾರ್ಮೆಂಟ್ಸ್, ಕೈಗಾರಿಕೆಗಳು ಮತ್ತು ಇತರ ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪ ಸಂಖ್ಯಾತ ವರ್ಗದ ದುಡಿಯುವ ಮಹಿಳೆಯರಿಗೆ ಆದ್ಯತೆ ಮೇರೆಗೆ ಸೌಲಭ್ಯ ನೀಡಲಾಗುತ್ತಿದೆ.**

ರಾಜ್ಯದ 31ಜಿಲ್ಲೆಗಳಲ್ಲಿ ಗೃಹರಕ್ಷಕ ದಳದ ಮಹಿಳಾ ಸದಸ್ಯರನ್ನೊಳಗೊಂಡ ಈ ಪಡೆ ಗಸ್ತು ಸಂಚರಿಸಲು ವಾಹನ ಸೌಲಭ್ಯವನ್ನೂ ಹೊಂದಿದೆ.

**ಶಕ್ತಿ ಸದನ (ಸ್ವಾಧಾರ ಗೃಹ ಮತ್ತು ಉಜ್ವಲ ಕೇಂದ್ರ):** ಸ್ವಾಧಾರ ಗೃಹ ಯೋಜನೆಯ ಮುಖ್ಯ ಉದ್ದೇಶ- ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಆಶ್ರಯ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಅವರನ್ನು ಸಶಕ್ತರನ್ನಾಗಿ ಮಾಡುವುದಾಗಿರುತ್ತದೆ. ಉಜ್ವಲ ಯೋಜನೆಯು ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟುವ, ಹಾಗೂ ಸಾಗಾಣಿಕೆ ಮತ್ತು ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸುವ ಮತ್ತು ಪುನರ್ವಸತಿ ಕಲ್ಪಿಸುವ ಹಾಗೂ ಇವರುಗಳ ಕುಟುಂಬದವರೊಂದಿಗೆ ಮರುವಿಲೀನಗೊಳಿಸುವ ಉದ್ದೇಶವನ್ನು ಹೊಂದಿರುತ್ತದೆ. ಪ್ರಸ್ತುತ ರಾಜ್ಯಾದ್ಯಂತ 40 ಶಕ್ತಿ ಸದನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

**ಒನ್ ಸ್ಟಾಪ್ ಸೆಂಟರ್ (ಸಖಿ):** ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ಸಮಗ್ರ ಸೌಲಭ್ಯ ಅಂದರೆ, ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೊಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ವ್ಯವಸ್ಥೆಗಳನ್ನು ಒನ್ ಸ್ಟಾಪ್ ಸೆಂಟರ್‌ನಲ್ಲಿ ಒದಗಿಸಲಾಗುತ್ತಿದೆ. ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ಒನ್ ಸ್ಟಾಪ್ ಸೆಂಟರ್‌ಗಳು ಕಾರ್ಯ ನಿರ್ವಹಿಸುತ್ತಿವೆ.

**ಸಾಂತ್ವನ ಯೋಜನೆ:** ಸಮಾಜದಲ್ಲಿ ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ, ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಕಾನೂನು ನೆರವು ಹಾಗೂ ಸಮಾಲೋಚನೆಯನ್ನು ಒದಗಿಸಲಾಗುತ್ತಿದೆ. ಪ್ರಸ್ತುತ 177 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

### ವಿಶೇಷ ಪುನರ್ವಸತಿ ಯೋಜನೆಗಳು

**ಮಾಜಿ ದೇವದಾಸಿ ಪುನರ್ವಸತಿ:** ಮಾಜಿ ದೇವದಾಸಿಯರನ್ನು ಆರ್ಥಿಕವಾಗಿ ಸಬಲೀ ಕರಣಗೊಳಿಸಲು ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳುವ ಉದ್ದೇಶಕ್ಕಾಗಿ, 45 ವರ್ಷ ಮೇಲ್ಪಟ್ಟ ಮಾಜಿ ದೇವದಾಸಿ ಮಹಿಳೆಯರಿಗೆ ನೇರವಾಗಿ ಪ್ರೋತ್ಸಾಹಧನ ಮೊತ್ತವಾದ 45000 ರು.ಗಳ ಆರ್ಥಿಕ ಸೌಲಭ್ಯವನ್ನು ನಿಗಮದಿಂದ ನೀಡಲಾಗುತ್ತಿದೆ. ಫಲಾನುಭವಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ಆಯ್ಕೆ ಮಾಡಲಾಗುತ್ತದೆ.

### ಉದ್ಯೋಗ ಸಲಹಾ ಸೇವೆಗಳು

**ಲಿಂಗತ್ವ ಅಲ್ಪಸಂಖ್ಯಾತರ ಕಲ್ಯಾಣ:** ರಾಜ್ಯದಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ; ರಾಜ್ಯಾದ್ಯಂತ ಒಟ್ಟು 10,365 ಲಿಂಗತ್ವ ಅಲ್ಪಸಂಖ್ಯಾತರು ಸಮೀಕ್ಷೆಯಲ್ಲಿ ಗುರುತಿಸಿಕೊಂಡಿದ್ದು, ಸದರಿ ಸಮುದಾಯದವರ ಪುನರ್ವಸತಿಗೆ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಒಟ್ಟು 4689 ಲಿಂಗತ್ವ ಅಲ್ಪಸಂಖ್ಯಾತರಿಗೆ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ.

ಮಹಿಳೆಯರು, ಪುರುಷರು ಜಂಟಿಯಾಗಿ ನಮ್ಮ ನಾಡಿನ ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲಿ ಸಮಾನ ಪಾತ್ರ ವಹಿಸಲು ಸರಕಾರದ ಯೋಜನೆಗಳೊಂದಿಗೆ ಸಮಾಜದ ಮಾನಸಿಕ ಹಾಗೂ ಮೌಲಿಕ ಹೊಣೆ ಇರಲಿ ಎಂದು ಆಶಿಸುತ್ತೇನೆ.

**- ಶಾಲಿನಿ** ರಜನೀಶ್

# ಅರೆಮಲೆನಾಡಿನ ಹಿರಿಮೆಗೆ ಸೌಹಾರ್ದತೆಯ ಗರಿ ಮೂಡಿಸಿದ ಸಂತ ಶ್ರೇಷ್ಠರು ಪೂಜ್ಯ ಶ್ರೀ ಶ್ರೀ ಶಂಭುನಾಥ ಸ್ವಾಮೀಜಿಯವರ ಜನ್ಮ ದಿನೋತ್ಸವಕ್ಕೆ ಭಕ್ತಿಯ ನುಡಿನಮನ



ವಿಶ್ವದ ಇಹಾಸದಲ್ಲಿ ಭಾರತ ದೇಶವು ವೈಶಿಷ್ಟ್ಯಪೂರ್ಣವಾದ ಸ್ಥಾನ ಪಡೆದ ಅಗ್ರಮಾನ್ಯ ದೇಶವಾಗಿದೆ. ಭಾರತದ ಇತಿಹಾಸದ ಪುಟ-ಪುಟಗಳಲ್ಲೂ ಸಾಧು-ಸಂತರ, ತತ್ವಜ್ಞಾನಿಗಳ, ಮಹಾತ್ಮರ, ಕವಿ-ಸಾಹಿತಿಗಳ, ವೀರ ಪುರುಷರ ಚರಿತ್ರೆಗಳು ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟಿದ್ದು ಇಂದಿಗೂ ನಮ್ಮ ಕಣ್ಮುಂದಿನ ಸಾಕ್ಷಿಗಳಾಗಿ ಗೋಚರಿಸುತ್ತಿವೆ. ಭಾರತೀಯ ಸಾಂಸ್ಕೃತಿಕ ಇತಿಹಾಸವೇ ಧರ್ಮ. ಈ ಧರ್ಮವನ್ನು ಜೀವಂತವಾಗಿ ಬೆಳೆಸಿ ಇಂದಿನ ಕಾಲಘಟದವರೆಗೂ ಜೀವಂತವಾಗಿರಿಸಿದವರು ನಮ್ಮ ನಾಡಿನ ಧರ್ಮಪುರುಷರು. ಪಕ್ಷ-ಪಾಬಲ್ಯಗಳ ಭೌತಿಕ ವಿಜ್ಞಾನ ಯುಗದಲ್ಲಿರುವ ಆಧುನಿಕರಿಗೆ ಧರ್ಮಪುರುಷರ ವೈಯಕ್ತಿಕ ತೇಜಸ್ಸಿನ ಅರಿವು ಸರಿಯಾಗಿ ಆಗಲಾರದು. ನಮ್ಮಲ್ಲಿ ಹಿಂದೆ ಆಗಿ ಹೋದ ವೀರ ಮಹನೀಯರ ಬದುಕಿಗೆ ಅವರ ನುಡಿಗೆ ಗುರುಗಳ ಉತ್ಸಾಹದ ಅಮೃತವಾಣಿಯ ಉಪದೇಶ ಜೀವಾಮೃತ... ದಿವ್ಯ ಔಷಧಿಗಳಾಗಿ ನವಚೈತನ್ಯ ತುಂಬುತ್ತಿದ್ದವು. ಇಂತಹ ಗುರುಗಳ ಅಥವಾ ಪೂಜ್ಯರ ಸಾಂಗತ್ಯವಿಲ್ಲದಿದ್ದರೆ ಜಗತ್ತು ಏನಾಗುತ್ತಿತ್ತು ಎಂದು ಊಹಿಸಲು ಸಾಧ್ಯವೇ ಇರದು.

ಈ ಜಗದೋದ್ಧಾರಕ್ಕೆ ದೈವೀ ಶಕ್ತಿಯ ಪುಣ್ಯಪುರುಷರು ಸ್ವತಃ ತಾವೇ ಅವತರಿಸಿದರೆ ಮತ್ತೆ ಕೆಲವರು ಜನ್ಮ ಪಡೆದ ನಂತರ ಮಹಾಗುರುಗಳ ಸಾಂಗತ್ಯದ ದಿವ್ಯಾಶೀರ್ವಾದ ಹಾಗೂ ಸಂಸ್ಕಾರಗಳಿಂದ ಪುಣ್ಯಪುರುಷರಾಗಿ ತಮ್ಮ ಬದುಕನ್ನು ಸಮಾಜದೊಳಿತಿಗೆ ವಿನಿಯೋಗಿಸುವ ಮೂಲಕ ಸಾರ್ಥಕ್ಯದ ಭಾವ ಹೊಂದುತ್ತಾರೆ. ಇಂತಹವರ ಸಾಲಿನಲ್ಲಿ ನಮಗೆ ಕಾಣ ಸಿಗುವ ಪೂಜ್ಯರೆಂದರೆ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಹಾಸನ ಮತ್ತು ಕೊಡಗು ಜಿಲ್ಲೆಯ ಪೂಜ್ಯ ಶ್ರೀ ಶ್ರೀ ಶಂಭುನಾಥ ಸ್ವಾಮೀಜಿಯವರು, ಪೂಜ್ಯರ ಕಾರ್ಯದಕ್ಷತೆ, ಕ್ರಿಯಾಶೀಲತೆ, ಸೇವಾ ಬದ್ಧತೆ, ತಾಯ್ತನದ ಆದ್ಯತೆ, ಗಾಂಭೀರ್ಯತೆ, ಮುಗ್ಧತೆ, ಮಾನವತ್ತತೆ ಎಲ್ಲರನ್ನೂ ಸೆಳೆಯುವ ಪ್ರಖರತೆ ಹೀಗೆ ಸರ್ವಗುಣ ಸುಗುಣವಂತರಾಗಿ ಕೆಲವೇ ವರ್ಷಗಳಲ್ಲಿ ಜಿಲ್ಲೆಯ ಜನಮನದಲ್ಲಿ ಗುರುವಾಗಿ, ಪೂಜ್ಯರಾಗಿ, ಸಂಸ್ಕಾರದ ಸೌರಭವಾಗಿ, ಸುಜ್ಞಾನದ ನಿಧಿಯಾಗಿ, ಅಖಂಡ ಬ್ರಹ್ಮಾಚಾರಿಗಳಾಗಿ ನೆಲೆನಿಂತ ಧರ್ಮ ಪುರುಷರಾಗಿದ್ದಾರೆ.

ಧಾರ್ಮಿಕ ಸೇವಾಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡುವ ಜೊತೆಗೆ ಸುತ್ತಮುತ್ತಲಿನ ಗ್ರಾಮಗಳ ಭಕ್ತವೃಂದದ ಧರ್ಮ ಗುರುಪೀಠದ ಅಯ್ಯನವರ (ಒಡೆಯ) ಮನೆತನದ ಶ್ರೀ ಶಂಭುಲಿಂಗೇಶ್ವರ ಸ್ವಾಮಿಯ ಪರಮಾರಾಧಕರಾಗಿರುವ ಪೂಜ್ಯ ಶ್ರೀ ಶ್ರೀ ಶಂಭುಲಿಂಗಸ್ವಾಮಿಗಳು ಹಾಗೂ ಮಾತೆ ಶ್ರೀಮತಿ ಮಹದೇವಮ್ಮನವರು ತಮ್ಮ ಸುಖ ದಾಂಪತ್ಯದಲ್ಲಿ ಪರಸರ ಗೌರವ, ದೈವಭಕ್ತಿ, ಧಾರ್ಮಿಕ ಸೇವೆಯಲ್ಲಿ ಶ್ರದ್ಧೆ, ಸಮಾನ ಅಭಿರುಚಿ, ಕರುಣೆ, ಶ್ರಮ, ದೀನದಲಿತರನ್ನು ತಮ್ಮ ತೆಕ್ಕೆಗಳಲ್ಲಿ ಪೋಷಿಸುತ್ತ ಈ ಲೋಕದ ಆದರ್ಶ ಸತಿಪತಿಗಳಾಗಿದ್ದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನ ಪುಣ್ಯಕ್ಷೇತ್ರ, ಐನೋರಗೊಲ್ಲಹಳ್ಳಿ, ಹಸಿರು ಹಾಸಿನ ಮಧ್ಯದಲ್ಲಿ ಕಂಗೊಳಿಸುತ್ತಿರುವ ಪುಣ್ಯಕ್ಷೇತ್ರದ ಅಧಿದೈವ ಶ್ರೀಶಂಭುಲಿಂಗೇಶ್ವರಸ್ವಾಮಿ. ಶ್ರೀ ಸ್ವಾಮಿಯವರಿಗೊಂದು ಸುಂದರವಾದ ಆಲಯ, ಆಲಯದ ಬಲಭಾಗದಲ್ಲಿ ಸದಾ ತಿಳಿಯಾದ ಗಂಗೆಯಿಂದ ತುಂಬಿರುವ ಕಲ್ಯಾಣಿ, ನಿತ್ಯವೂ ಸೂರ್ಯೋದಯದ ಸಂದರ್ಭ ದಲ್ಲಿ ಘಂಟಾನಾದ, ವೇದಮಂತ್ರಗಳ ಘೋಷಣೆ ಯೊಂದಿಗೆ ಭಗವಂತನಿಗೆ ಪೂಜಾ-ಕೈಂಕರ್ಯಗಳ ಸೇವೆ, ಹೀಗೆಯೇ ದೈವ ಹಾಗೂ ಧಾರ್ಮಿಕ ಸೇವೆಗಳಲ್ಲಿ ತೊಡಗಿಸಿಕೊಂಡು ಸುತ್ತಲೂ ಇಪ್ಪತ್ತೈದು ಹಳ್ಳಿಗಳ ಭಕ್ತರ ಇಷ್ಟಾರ್ಥಗಳನ್ನು ಪೂರೈಸಲು ಕಟಿಬದ್ಧರಾಗಿದ್ದ ಪುಣ್ಯ ದಂಪತಿಗಳಾಗಿದ್ದ ಶ್ರೀ ಶಂಭುಲಿಂಗೇಶ್ವರಸ್ವಾಮಿ ಹಾಗೂ ಶ್ರೀಮತಿ ಮಹದೇವಮ್ಮನವರ ಎರಡನೇ ಸಂತಾನವಾಗಿ ಶ್ರೀ ಶಂಭುಲಿಂಗೇಶ್ವರನ ಕೃಪೆಯಿಂದ ಗಂಡು ಶಿಶುವೊಂದು ದಿನಾಂಕ:10-03-1979ರ ಶನಿವಾರ ಭುವನದ ಭಾಗ್ಯವೋ ಎಂಬಂತೆ ಜನಿಸಿತು. ಮನೆಯವರಿಗಷ್ಟೇ ಅಲ್ಲದೇ ಊರಿನವರಿಗೆಲ್ಲಾ ಸಂಭ್ರಮವೆನಿಸಿತು.

ಹಳ್ಳಿಯ ಸಮಸ್ತರೂ ಮಗುವಿನ ಅಪೂರ್ವ ಲಾವಣ್ಯಕ್ಕೆ ಕರಗಿದರು. ಹಾಗೆಯೇ ಬೆರಗಾದರು. ಊರಿನ ಕಣ್ಮಣಿಯಾಗಿ ಬಿಟ್ಟಿತು ಮಗು. ಕೆಲವೇ ದಿನಗಳಲ್ಲಿ ಅನಿರೀಕ್ಷಿತವಾಗಿ ಬಂದ ಯೋಗಿಯೊಬ್ಬರು ಈ ಕಂದನನ್ನು ಕಂಡು ಭೂಮಿಗಿಳಿದ ಶಿವ ಕಳೆಯ ಕಾರಣಿಕ ಪುರುಷನಿವನು, ಇವನಿಂದ ಲೋಕ ಕಲ್ಯಾಣವಾಗುವುದು ಎಂದು ಭವಿಷ್ಯ ನುಡಿದು ನಡೆದೇ ಬಿಟ್ಟರು. ಮನೆಯವರು ಈ ಮಾತು ಕೇಳಿ ದಿಗ್ಮೂಢರಾದರು.

ಅವತರಿಸಿದ ಮೌಢ್ಯ ಅಜ್ಞಾನ, ದಾರಿದ್ರ್ಯಗಳ ನಿವಾರಣೆಗೆಂದೇ ಪರಶಿವನ ಪ್ರತಿನಿಧಿಯಾಗಿ ತೇಜೋ ರೂಪಿಯಾಗಿ ಶಿಶುವನ್ನು ಹಡೆದತಾಯಿ ಮಹಾ ಭಾಗ್ಯಶಾಲಿನಿಯೇ ಸರಿ. ಹರೀಶ್ ಸ್ವಾಮಿ ನಾಮಾಂಕಿತದೊಡನೆ, ತಾಯ್ತಂದೆಗಳಿಗೆ ವಿಧೇಯರಾಗಿ ಒಡಹುಟ್ಟಿದವರೊಡನೆ ಅನ್ಯೋನ್ಯವಾಗಿ ಬೆರೆತು ಸಾತ್ವಿಕ ಮನೋಗುಣಗಳ ನಿಧಿಯಾಗಿ ಅಧ್ಯಯನ, ಆಧ್ಯಾತ್ಮ, ವೈದ್ಯಕೀಯ ವಿಷಯಗಳಲ್ಲಿ ಆಸಕ್ತಿ, ಪೂರ್ವಾಪರ ಯಾವುದನ್ನು ವಿಶ್ಲೇಷಿಸದೆ ಕೂಡಲೇ ಯಾವುದನ್ನು ನಂಬದ ವೈಚಾರಿಕ ಮನೋಭಾವ ಇವೆಲ್ಲಾ ಅವರಿಗೆ ಸ್ವಭಾವತಃ ಇದ್ದ ಗುಣಗಳೇ, ಶಾಂಭಯಸ್ವಾಮಿಯವರು ಬಾಲಕ ಹರೀಶ್ ಸ್ವಾಮಿಯವರಿಗೆ ಉತ್ತಮ ಗುಣಗಳು ಪ್ರವರ್ಧಿಸಲು ಹೆಚ್ಚು ಪ್ರೋತ್ಸಾಹಿಸಿದರು. ಬೆಳೆಯುವ ಪೈರು ಮೊಳಕೆಯಲ್ಲಿಯೇ ಎಂಬಂತೆ ಮೊಮ್ಮಗನ ಜ್ಞಾನದಾಹ ಆಧ್ಯಾತ್ಮದ ಆಸಕ್ತಿಯನ್ನು ಮನಗಂಡ, ತಾತ ಮೊಮ್ಮಗನನ್ನು ಪ್ರೀತಿ ಗೌರವದಿಂದ ಗುರುಗಳೇ ಎಂದೇ ಕರೆಯುತ್ತಿದ್ದರಂತೆ.

ಶನಿವಾರ ಶುಭ ಸಮಯದಲ್ಲಿ ಎಲ್ಲರ ಸುದೈವವು ಎಂಬಂತೆ ಈ ಭೂಮಿಗೆ ಹರೀಶ್ ಸ್ವಾಮಿಯವರು ಅವತರಿಸಿದರು. ಮಗುವಿನ ಅಪೂರ್ವ ಲಾವಣ್ಯಕ್ಕೆ ಬೆರಗಾಗುವ ಜೊತೆಗೆ ಇಡೀ ಹಳ್ಳಿಯವರ ನೆಚ್ಚಿನ ಕಣ್ಮಣಿಯಾಗಿ ಎಲ್ಲರ ಲಾಲಿಹಾಡು ಕೇಳುತ್ತ, ಎಲ್ಲರ ನಡುವೆ ಬೆಳೆಯುತ್ತಾ, ಹರೀಶ್‌ಸ್ವಾಮಿ ಎಂಬ ನಾಮಾಂಕಿತದಿಂದ ಇಡೀ ಹಳ್ಳಿಯ ಅತಿ ಚುರುಕಿನ ವಿಶಿಷ್ಟ ವ್ಯಕ್ತಿತ್ವದ ಒಡಹುಟ್ಟಿದವರೊಂದಿಗೆ, ನೆರೆಹೊರೆಯವರೊಂದಿಗೆ, ದೀನದಲಿತರೊಂದಿಗೆ ಅನ್ಯೋನ್ಯವಾಗಿ ಬೆರೆತು ಮಾನವೀಯ ಮೌಲ್ಯಗಳ ಸುಗುಣಶೀಲರಾಗುತ್ತಾರೆ. ಸಹೋದರಿಯರಾದ ಪೂರ್ಣಿಮಾ ಹಾಗೂ ಹರಿಣಿಯವರ ಮುದ್ದಿನ ಸಹೋದರನಾಗಿ ಬಾಲ್ಯದ ದಿನಗಳನ್ನು ಬಹು ಸೊಗಸಾಗಿ ಕಳೆಯುತ್ತಾರೆ.

ಸಹೋದರ ಪುನೀತ್‌ಕುಮಾರ್‌ರವರನ್ನು ತಮ್ಮೊಂದಿಗೆ ಆಟೋಟಗಳಲ್ಲಿ ಜೊತೆಯಾಗಿಸಿಕೊಂಡು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದರು. ಮುಖದಲ್ಲಿ ಸದಾ ಮಂದಸ್ಮಿತ ನಗು, ಆಕರ್ಷಿಸುವ ನೇತ್ರಗಳು, ನೋಡಿದರೆ ಮತ್ತೊಮ್ಮೆ ನೋಡಬೇಕೆನಿಸುವ ಆಕರ್ಷಕ ದೈಹಿಕ ಮೈಕಟ್ಟು, ಸಮೃದ್ಧವಾದ, ಸಂತೋಷ ಭರಿತವಾದ ಜೀವನ ಇವರದ್ದಾಗಿತ್ತು. ಒಮ್ಮೊಮ್ಮೆ ಬಯಸಿ ಭಗವಂತನ ಧ್ಯಾನದಲ್ಲಿ ಲೀನವಾಗುತ್ತಿದ್ದರು. ಒದಿನಲ್ಲಿ ಮುಂದಿದ್ದ ಶ್ರೀಗಳವರು ಮತ್ತೇನ್ನೇನೋ ನಾನು ಸಾಧಿಸುವುದು ಇದೆ ಎಂದು ಹಪಹಪಿಸುತ್ತಿದ್ದರು. ಈ ಲೌಕಿಕ ಜೀವನದ ಬಗ್ಗೆ ಜಿಗುಪ್ಸೆ ಹೊಂದಿ ಪಾರಮಾರ್ಥಿಕ ವಿಷಯ ದೆಡೆಗೆ ಆಕರ್ಷಿತವಾಗಿ ಆಳವಾದ ಆಧ್ಯಾತ್ಮಜ್ಞಾನ ಹೊಂದಿ ಭಗವಂತನೆಡೆಗೆ ಸಾಗಿ ಬಂದಷ್ಟು ಸಮಾಜದ ಸೇವೆಗೈಯಬೇಕೆಂಬ ಸಂಕಲ್ಪ ಮಾಡಿ ಪೂಜ್ಯ ತಂದೆಯವರ ಹಾಗೂ ತಾಯಿಯವರ ಅಪ್ಪಣೆ ಪಡೆದು ಜ್ಞಾನ, ಆಚಾರ, ವಿಚಾರ ನಡೆ, ನುಡಿ, ಧ್ಯಾನ ಸಂಸ್ಕೃತ ವೇದಾಗಮ ಅದ್ವೈತ ವೇದಾಂತ, ದೈವ, ಶ್ರೀ ಗುರುದರ್ಶನಗಳ ಸಂಗಮದ ಪುಣ್ಯಕ್ಷೇತ್ರವಾದ ಶ್ರೀ ಕ್ಷೇತ್ರ ಆದಿಚುಂಚನಗಿರಿಗೆ ಪಯಣ ಬೆಳೆಸುತ್ತಾರೆ.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ದಿನಕರ ಪರಮಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಮಡಿಲಿನಲ್ಲಿ ಆಶ್ರಯ ಪಡೆದು ಸಂಸ್ಕೃತ, ವೇದಾಗಮ ಅದ್ವೈತ ವೇದಾಂತ ಶಾಸ್ತ್ರಗಳನ್ನು ಅತ್ಯಂತ ಆಸಕ್ತಿಯಿಂದ ಕಲಿತು ವಿದ್ವಾಂಸರಾಗಿ ಜ್ಞಾನದ ನಿಧಿಯಾಗುತ್ತಾರೆ. ವಿದ್ಯಾರ್ಜನೆಯ ಜೊತೆಗೆ ಜಗದ್ಗುರುಗಳ ಸೇವೆಯನ್ನು ಅತ್ಯಂತ ಶ್ರದ್ಧೆ, ಭಕ್ತಿ ಹಾಗೂ ನಿಷ್ಕಾಮ ಮನಸ್ಸಿನಿಂದ ನಿಷ್ಠೆಯಿಂದ ಮಾಡಿ ಜಗದ್ಗುರುಗಳ ಹೃತ್ಕಮಲದಲ್ಲಿ ನೆಲೆಸಿ ಅವರ ಮಾನಸ ಪುತ್ರರಾಗಿ ಬಿಡುತ್ತಾರೆ.

ಬದುಕಿನ ಸಾರ್ಥಕತೆಯ ಬಗ್ಗೆ ನಡೆಯುತ್ತಿದ್ದ ಅವರ ಮನೋ-ಮಂಥನ-ಚಿಂತನ ಮುಂದೆ ಅವರು ಸ್ವೀಕರಿಸಿದ ಸನ್ಯಾಸ ದೀಕ್ಷೆಯ ಹಿಪ್ಪೆ ಮರ, ಬೋಧಿ ವೃಕದಷ್ಟೇ ಪವಿತ್ರವಾದುದು. ವಿತಾಹಾರಿಯಾದ ಇವರು ರಾಗಿ ಮುದ್ದೆ ಸೊಪ್ಪಿನ ಸಾರು ಪ್ರಿಯರು ಕೆಲಸದಲ್ಲಿ ಅತಿಚುರುಕು ಲೌಕಿಕ ವಿಷಯಗಳಲ್ಲಿ ಅವರು ಅಂಟಿಯೂ ಅಂಟದಂತಿದ್ದರು. ಅಮೂರ್ತ ವಿಷಯಯಗಳ ಬಗ್ಗೆ ಚರ್ಚಿಸಿ ತಿಳಿದುಕೊಳ್ಳಲಿಚ್ಚಿಸುತ್ತಿದ್ದ ಹರೀಶ್ ಸ್ವಾಮಿಯವರು ಅಧ್ಯಾಪಕರುಗಳಿಗೆ ವಿಶಿಷ್ಟ ವಿದ್ಯಾರ್ಥಿಯಾಗಿ ಕಾಣಿಸುತ್ತಿದ್ದರು. ಮನಸಿಗೆ ಮೀರಿದ ಆಧ್ಯಾತ್ಮಿಕ ಪ್ರೀತಿ ಅವರಿಗೆ ಸಹಜ ವೈರಾಗ್ಯವನ್ನುಂಟುಮಾಡಿದ್ದಿತು.

ಹರೀಶ್ ಸ್ವಾಮಿಯವರ ಸೇವಾಪರತೆ, ದೂರದೃಷ್ಟಿ ಹಾಗೂ ಸಂಕಲವನ್ನರಿತ ಜಗದ್ಗುರುಗಳು ಪಾಶ್ಚಿಮಾತ್ಯ ರಾಷ್ಟ್ರವಾದ ದೂರದ ಅಮೇರಿಕಾ ದೇಶಕ್ಕೆ ನಮ್ಮ ಭಾರತದ ಸನಾತನ ಧಾರ್ಮಿಕ ಸಂಸ್ಕೃತಿಯನ್ನು ಪಸರಿಸಲೆಂದು ಕಳುಹಿಸುತ್ತಾರೆ. ನಮ್ಮದೇ ಸನಾತನ ಸಂಸ್ಕೃತಿಯನ್ನು ಹಾಸು, ಹೊದ್ದು, ಮಲಗಿ ರಕ್ತದ ಕಣಕಣದಲ್ಲೂ ನಮ್ಮದೇ ಧರ್ಮದ ಮೂಲ ಬೇರಿದ್ದರಿಂದ ಅಲ್ಲಿಯ ಸ್ವಚ್ಛಚಾರದ ಸಂಸ್ಕೃತಿಯನ್ನು ಕಂಡು ಬೇಸರದಿಂದ ಭಾರತಕ್ಕೆ ಹಿಂದಿರುಗುತ್ತಾರೆ. ತಮ್ಮಲ್ಲಿದ್ದಂತಹ ಸದ್ಗುಣಗಳಿಂದ ಊರಿನವರ ಪ್ರೀತಿ ಗಳಿಸಿ ಕೊಂಡಿದ್ದಂತಹ ಶಂಭಯ್ಯನವರಿಗೆ ಲೋಕ ಪ್ರೀತಿಯ ಗಳಿಕೆಗೂ ಕಾಲ ಒದಗಿ ಬಂತು. ಸನ್ಯಾಸಿಯಾಗುವ ಅವರ ಆಸೆ ಫಲಿಸುವ ವೇಳೆ ಸನ್ನಿಹಿತವಾಗಿತ್ತು. ಕನಸಿನಲ್ಲಿ ಸದಾ ಬಾ ಬಾ ಕಂದ ಎಂದು ಕೈ ಬೀಸಿ ಕರೆಯುತ್ತಿದ್ದ ಶೀ ಕಾಲಭೈರವೇಶ್ವರನು ಅವರನ್ನು ಆದಿಚುಂಚನಗಿರಿ ಕ್ಷೇತದ ಸೇವೆ ಮಾಡಲು ನಿಜವಾಗಿಯು ಕರೆಸಿಕೊಂಡ. ಇದನ್ನರಿತ ಮಹಾಗುರುಗಳು ಇವರಿಗೆ ಸನ್ಯಾಸ ದೀಕ್ಷೆ ನೀಡುವ ಸಂಕಲ್ಪ ಮಾಡಿ ಗುರು ಪೌರ್ಣಿಮೆಯಂದು ವಿಧಿವತ್ತಾಗಿ ಸನ್ಯಾಸ ದೀಕ್ಷೆ ನೀಡುತ್ತಾರೆ.

ಮಹಾಗುರುಗಳು ನೀಡಿದ ದೀಕ್ಷೆಯಿಂದ ಇವರ ದೇಹದಲ್ಲಿ ಮಿಂಚಿನ ಸಂಚಾರವಾಗಿ ಅವರ ಸ್ಪರ್ಶ ಮಾತ್ರದಿಂದಲೇ ದಿವ್ಯವಾದ ದೈವೀಶಕ್ತಿ ಪಡೆದುಕೊಂಡು ಪೂಜ್ಯ ಶಂಭುನಾಥ ಸ್ವಾಮೀಜಿಯವರಾಗುತ್ತಾರೆ. ದಿನಾಂಕ : 27/08/2004ರಂದು ಹಾಸನದ ಶ್ರೀ ಆದಿಚುಂಚನಗಿರಿ ಶಾಖಾ ಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಇಡಿ ಜಿಲ್ಲೆಯ ಎಲ್ಲಾ ಭಕ್ತರ ಪ್ರೀತಿಗೆ ಪಾತ್ರರಾಗುತ್ತಾರೆ.

ಜಗದ್ಗುರುಗಳ ಸನಿಹದಲ್ಲಿಯೇ ಅವರ ಮಡಿಲಿನಲ್ಲಿಯೇ ತಾಯಿಯಂತಹ ಪ್ರೀತಿಯನ್ನು ಪಡೆದು ಬೆಳೆದ ಪೂಜ್ಯರು ಜಗದ್ಗುರುಗಳಂತೆಯೇ ಮನದಲ್ಲಿ ಸಂಕಲ್ಪಿಸಿಕೊಂಡ ಹಾಗೂ ಕೈಗೊಂಡ ಕಾರ್ಯಗಳು ಗುಣಮಟದಿಂದ ಸಾಧನೆಯ ಪಥವೇರುವವರೆಗೂ ಬಿಡುವವರಲ್ಲ, ಇವರ ಸೇವಾಸಂಕಲದಿಂದ ಇಂದು ಅನೇಕ ಶಾಲಾ-ಕಾಲೇಜುಗಳು ನಿರ್ಮಾಣವಾಗಿದೆ. ಚಿಕ್ಕಬೊಮ್ಮನಹಳ್ಳಿಯ ಶ್ರೀ ರಂಗನಾಥಸ್ವಾಮಿ ದೇವಾಲಯ ಪುನರ್ನಿಮಾಣಗೊಂಡು ಲೋಕಾರ್ಪಣೆಗೊಂಡಿದೆ. ಬೇಲೂರು ಮತ್ತು ಅರಕಲಗೂಡಿನಲ್ಲಿ ಸುಸಜ್ಜಿತವಾದ ಕಾಲೇಜು ಕಟ್ಟಡಗಳು ನಿರ್ಮಾಣವಾಗಿವೆ. ಹಾಸನ ನಗರದ ಶ್ರೀ ಆದಿಚುಂಚನಗಿರಿ ಸಮುದಾಯ ಭವನ ಆಧುನಿಕ ರೀತಿಯಲ್ಲಿ ಪುನರ್ನವೀಕರಣಗೊಂಡಿದೆ. ಶ್ರೀ ಮಠದ ಅಂಗಳದಲ್ಲಿ ನವನಾಥಯಾಗ ಮಂಟಪ ಲೋಕಾರ್ಪಣೆಗೊಂಡಿದೆ. ಚನ್ನರಾಯಪಟ್ಟಣದ ಶ್ರೀ ಆದಿಚುಂಚನಗಿರಿ ಸಮುದಾಯ ಭವನ ಆಧುನಿಕ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಇವಲ್ಲದೇ ಇನ್ನೂ ಅನೇಕ ಕಟ್ಟಡಗಳ ನಿರ್ಮಾಣದ ಕಾಮಗಾರಿಗಳು ಪಗತಿಯಲ್ಲಿವೆ. ಇಂತಹ ಸಂಕಲ್ಪ ಸಿದ್ಧಿ ಜಗದ್ಗುರುಗಳಿಂದ ಲಭಿಸಿದ್ದು, ಜಗದ್ಗುರುಗಳನ್ನು ಸದಾ ಸ್ಮರಿಸುವ ಜೊತೆಗೆ ಅನುಕ್ಷಣವೂ ಅವರ ಧ್ಯಾನದಲ್ಲೇ ಲೀನವಾಗಿ ಬಿಡುತ್ತಾರೆ. ಇದರಿಂದ ಪರಿಪಕ್ವತೆಯುಳ್ಳ ಸಾಕಾರ ಮೂರ್ತಿಯಾಗಿರುವ ಪೂಜ್ಯರ ತೇಜ ಸ್ಸು ಓಜಸ್ಸು ದೈವಾಂಶ ಗುಣಗಳು ಇಮ್ಮಡಿಗೊಂಡಿವೆ. ನಾಡಿನ ಅದೆಷ್ಟೋ ದೀನದಲಿತರ ಮಕ್ಕಳಿಗೆ ಆಶಯದಾತರಾಗಿದ್ದಾರೆ. ಯಾರಲ್ಲಿಯೂ ಜಾತಿಯ-ಭೇದವೆಣಿಸದ ನಿಷ್ಕಲ್ಮಶ ಜ್ಯೋತಿಯ ಬೆಳಕಾಗಿದ್ದಾರೆ. ಹಾಸನದ ಶ್ರೀಮಠಕ್ಕೆ ಆಗಮಿಸಿದ ಕೇವಲ 20 ವರ್ಷಗಳಲ್ಲಿ ಅಗಣಿತ ಸಂಖ್ಯೆಯ ಭಕ್ತವೃಂದಕ್ಕೆ ಧಾರ್ಮಿಕವಾದ, ಸಾಂಸ್ಕೃತಿಕವಾದ, ಶೈಕ್ಷಣಿಕವಾದ ನೈತಿಕವಾದ ಪ್ರಸಾದವನ್ನು ಉಣಬಡಿಸಿ ಸನಾತನ ರಾಯಭಾರಿಯಾಗಿದ್ದಾರೆ.

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ ಕರಕಮಲ ಸಂಜಾತರೂ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ 72ನೇ ಪೀಠಾಧ್ಯಕ್ಷರೂ ಆಗಿರುವ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರನ್ನು ಸೌಹಾರ್ದಯುತವಾಗಿ ಭಕ್ತಿಯಿಂದ ಸರಿಸುತ್ತಾ ಜಿಲ್ಲೆಯ ಎಲ್ಲಾ ಭಕ್ತರಿಗೂ ಮಹಾಗುರುಗಳ ದರ್ಶನ ಭಾಗ್ಯ ಕರುಣಿಸುವ ಜೊತೆಗೆ ದಿವ್ಯಾನುಗ್ರಹ ಸಂದೇಶದ ಆಶೀರ್ವಚನ ಆಲಿಸುವ ಸೌಭಾಗ್ಯ ಕಲಿಸುತ್ತಿದ್ದಾರೆ. ಪರಮಪೂಜ್ಯ ಜಗದ್ಗುರುಗಳ ಎಲ್ಲಾ ಸೇವಾಕಾರ್ಯಗಳಿಗೂ ಶ್ರೀಗಳ ಸನಿಹದಲ್ಲಿದ್ದು ಮನೋಭಾವವುಳ್ಳವರಾಗಿದ್ದಾರೆ. ಅಹರ್ನಿಶಿ ಸೇವೆಗೈಯ್ಯುವ ಸೇವಾ ಹಾಸನದ. ಶೀಮಠದಲ್ಲಿ ನಡೆಯುತ್ತಿರುವ ಗುರು ತೋರಿದ ದಾರಿ-ತಿಂಗಳ ಮಾಮನತೇರಿನ ಹುಣ್ಣಿಮೆ ಕಾರ್ಯಕ್ರಮವು 138ನೇ ಕಾರ್ಯಕ್ರಮವಾಗಿ ಮುಂದುವರೆದಿದ್ದು, 7 ವಾರ್ಷಿಕೋತ್ಸವಗಳನ್ನು ಆಚರಿಸಿಕೊಂಡು ಬರಲು ಶ್ರೀಗಳವರ ಸೇವಾನಿಷ್ಠೆಗೆ ಹಿಡಿದ ಕನ್ನಡಿಯಾಗಿದೆ.

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ, ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರ ಹಾಗೂ ಶ್ರೀ ಕಾಲಭೈರವೇಶ್ವರ



ಸ್ವಾಮಿಯವರ ಕೃಪಾಶೀರ್ವಾದ ಹಾಗೂ ಅಣತಿಯಂತೆ ಪೂಜ್ಯ ಶ್ರೀ ಶ್ರೀ ಶಂಭುನಾಥ ಸ್ವಾಮೀಜಿಯವರ

## ಇಂತಹವರ ಸಾಲಿನಲ್ಲಿ ನಮಗೆ ಕಾಣ ಸಿಗುವ ಪೂಜ್ಯರು...

- ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ಹಾಸನ ಮತ್ತು ಕೊಡಗು ಜಿಲ್ಲೆಯ ಪೂಜ್ಯ ಶ್ರೀ ಶ್ರೀ ಶಂಭುನಾಥ ಸ್ವಾಮೀಜಿಯವರು, ಪೂಜ್ಯರ ಕಾರ್ಯದಕ್ಷತೆ, ಕ್ರಿಯಾಶೀಲತೆ, ಸೇವಾ ಬದ್ಧತೆ, ತಾಯ್ತನದ ಆದ್ಯತೆ, ಗಾಂಭೀರ್ಯತೆ, ಮುಗ್ಧತೆ, ಮಾನವತ್ತತೆ ಎಲ್ಲರನ್ನೂ ಸೆಳೆಯುವ ಪ್ರಖರತೆ ಹೀಗೆ ಸರ್ವಗುಣ ಸುಗುಣವಂತರಾಗಿ ಕೆಲವೇ ವರ್ಷಗಳಲ್ಲಿ ಜಿಲ್ಲೆಯ ಜನಮನದಲ್ಲಿ ಗುರುವಾಗಿ, ಪೂಜ್ಯರಾಗಿ, ಸಂಸ್ಕಾರದ ಸೌರಭವಾಗಿ, ಸುಜ್ಞಾನದ ನಿಧಿಯಾಗಿ, ಅಖಂಡ ಬ್ರಹ್ಮಾಚಾರಿಗಳಾಗಿ ನೆಲೆನಿಂತ ಧರ್ಮ ಪುರುಷರಾಗಿದ್ದಾರೆ.
- ಧಾರ್ಮಿಕ ಸೇವಾಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡುವ ಜೊತೆಗೆ ಸುತ್ತಮುತ್ತಲಿನ ಗ್ರಾಮಗಳ ಭಕ್ತವೃಂದದ ಧರ್ಮ ಗುರುಪೀಠದ ಅಯ್ಯನವರ (ಒಡೆಯ) ಮನೆತನದ ಶ್ರೀ ಶಂಭುಲಿಂಗೇಶ್ವರ ಸ್ವಾಮಿಯ ಪರಮಾರಾಧಕರಾಗಿರುವ ಪೂಜ್ಯ ಶ್ರೀ ಶ್ರೀ ಶಂಭುಲಿಂಗಸ್ವಾಮಿಗಳು ಹಾಗೂ ಮಾತೆ ಶ್ರೀಮತಿ ಮಹದೇವಮ್ಮನವರು ತಮ್ಮ ಸುಖ ದಾಂಪತ್ಯದಲ್ಲಿ ಪರಸರ ಗೌರವ, ದೈವಭಕ್ತಿ, ಧಾರ್ಮಿಕ ಸೇವೆಯಲ್ಲಿ ಶ್ರದ್ಧೆ, ಸಮಾನ ಅಭಿರುಚಿ, ಕರುಣೆ, ಶ್ರಮ, ದೀನದಲಿತರನ್ನು ತಮ್ಮ ತೆಕ್ಕೆಗಳಲ್ಲಿ ಪೋಷಿಸುತ್ತ ಈ ಲೋಕದ ಆದರ್ಶ ಸತಿಪತಿಗಳಾಗಿದ್ದರು.
- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ ತಾಲ್ಲೂಕಿನ ಪುಣ್ಯಕ್ಷೇತ್ರ ಐನೋರಗೊಲ್ಲಹಳ್ಳಿ, ಹಸಿರು ಹಾಸಿನ ಮಧ್ಯದಲ್ಲಿ ಕಂಗೊಳಿಸುತ್ತಿರುವ ಪುಣ್ಯಕ್ಷೇತ್ರದ ಅಧಿದೈವ ಶ್ರೀಶಂಭುಲಿಂಗೇಶ್ವರಸ್ವಾಮಿ.
- ಶ್ರೀ ಸ್ವಾಮಿಯವರಿಗೊಂದು ಸುಂದರವಾದ ಆಲಯ, ಆಲಯದ ಬಲಭಾಗದಲ್ಲಿ ಸದಾ ತಿಳಿಯಾದ ಗಂಗೆಯಿಂದ ತುಂಬಿರುವ ಕಲ್ಯಾಣಿ, ನಿತ್ಯವೂ ಸೂರ್ಯೋದಯದ ಸಂದರ್ಭದಲ್ಲಿ ಘಂಟಾನಾದ, ವೇದಮಂತ್ರಗಳ ಘೋಷಣೆಯೊಂದಿಗೆ ಭಗವಂತನಿಗೆ ಪೂಜಾ-ಕೈಂಕರ್ಯಗಳ ಸೇವೆ, ಹೀಗೆಯೇ ದೈವ ಹಾಗೂ ಧಾರ್ಮಿಕ ಸೇವೆಗಳಲ್ಲಿ ತೊಡಗಿಸಿಕೊಂಡು ಸುತ್ತಲೂ ಇಪ್ಪತ್ತೈದು ಹಳ್ಳಿಗಳ ಭಕ್ತರ ಇಷ್ಟಾರ್ಥಗಳನ್ನು ಪೂರೈಸಲು ಕಟಿಬದ್ಧರಾಗಿದ್ದ ಪುಣ್ಯ ದಂಪತಿಗಳಾಗಿದ್ದ ಶ್ರೀ ಶಂಭುಲಿಂಗೇಶ್ವರಸ್ವಾಮಿ ಹಾಗೂ ಶ್ರೀಮತಿ ಮಹದೇವಮ್ಮನವರ ಎರಡನೇ ಸಂತಾನವಾಗಿ ಶ್ರೀ ಶಂಭುಲಿಂಗೇಶ್ವರನ ಕೃಪೆಯಿಂದ ಗಂಡು ಶಿಶುವೊಂದು ದಿನಾಂಕ:10-03-1979ರ ಶನಿವಾರ ಭುವನದ ಭಾಗ್ಯವೋ ಎಂಬಂತೆ ಜನಿಸಿತು.
- ಮನೆಯವರಿಗಷ್ಟೇ ಅಲ್ಲದೇ ಊರಿನವರಿಗೆಲ್ಲಾ ಸಂಭ್ರಮವೆನಿಸಿತು.

ಸೇವಾಕಾರ್ಯ ನಿರಂತರವಾಗಿ ನೆರವೇರುತ್ತಿದ್ದು, ಎಲ್ಲಾ ಭಕ್ತರ ಮನದಲ್ಲಿ ಪುನಃ ಪುನಃ ನೆನಪು ಮಾಡಿಕೊಳ್ಳುವಂತೆ ಶ್ರೀಗಳವರ ಕಾರ್ಯ ಚಟುವಟಿಕೆಗಳು ಕಾರ್ಯರೂಪಕ್ಕೆ ಬರುತ್ತಿವೆ. ಇವೆಲ್ಲವೂ ಸಮಾಜಮುಖಿಯಾಗಿದ್ದು, ಅಭಿನಂದನೆಗೆ ಅರ್ಹವಾಗಿವೆ. ಪೂಜ್ಯರ ಸೇವೆಗೆ ನಾವೆಲ್ಲರೂ ವಂದಿಸೋಣ, ಇನ್ನೂ ಹೆಚ್ಚಿನ ಶಕ್ತಿ ನೀಡಲೆಂದು ಶ್ರೀ ಗುರುಗಳಲ್ಲಿ ಹಾಗೂ ಭಗವಂತನಲ್ಲಿ ಪ್ರಾರ್ಥಿಸೋಣ.

**- ಜೈ ಶ್ರೀ ಗುರುದೇವ್**
**- ವಿದ್ವಾನ್ ಹೆಚ್.ಕೆ. ಲಕ್ಷ್ಮಿ ನಾರಾಯಣ**
ಉಪನ್ಯಾಸಕರು (ಹುಲುಗುಂಡಿ) ಆದಿಚುಂಚನಗಿರಿ ಮಠ, ಹಾಸನ.

# ಭಾರತೀಯರ ಸುರಕ್ಷತೆಯೇ ನಮ್ಮ ಆದ್ಯತೆ

## ಭಾರತವು ಶಾಂತಿ -ಸಂವಾದ -ರಾಜ ತಾಂತ್ರಿಕತೆಗೆ ಮರಳಲು ಒಲವು: ಜೈಶಂಕರ್

• ಪ್ರಜೋದಯ ವರದಿ

**ನವದೆಹಲಿ:** ಉಲ್ಬಣಗೊಳ್ಳುತ್ತಿರುವ ಪಶ್ಚಿಮ ಏಷ್ಯಾ ಸಂಘರ್ಷದ ಬಗ್ಗೆ ರಾಜ್ಯ ಸಭೆಯಲ್ಲಿ ಮಾತ ನಾಡಿರುವ ವಿದೇಶಾಂಗ ಸಚಿವ ಜೈಶಂಕರ್ ಅವರು, ಭಾರತವು ಶಾಂತಿ ಮತ್ತು ಸಂವಾದ ಮತ್ತು ರಾಜ ತಾಂತ್ರಿಕತೆಗೆ ಮರಳಲು ಒಲವು ತೋರುತ್ತಿದೆ ಎಂದಿದ್ದಾರೆ.

ರಾಜ್ಯಸಭೆಯಲ್ಲಿ ಸಂಘರ್ಷದ ಕುರಿತು ಸ್ವಯಂಪ್ರೇರಿತ ಹೇಳಿಕೆ ನೀಡಿದ ಅವರು, ಈ ಪ್ರದೇಶದಲ್ಲಿನ ಭಾರತೀಯ ಸಮುದಾಯದ ಯೋಗ ಕ್ಷೇಮ ಮತ್ತು ಸುರಕ್ಷತೆಯು ಸರ್ಕಾರದ ಆದ್ಯತೆಯಾಗಿದೆ ಎಂದು ಹೇಳಿದರು. ನಾವು ಕೊನೆಯವರೆಗೂ ಈ ಪ್ರದೇಶದ ಸರ್ಕಾರಗಳೊಂದಿಗೆ ಕೆಲಸ ಮಾಡುವುದನ್ನು ಮುಂದುವರಿಸುತ್ತೇವೆ ಎಂದು ಅವರು ಹೇಳಿದರು.

ಇಂಧನ ಭದ್ರತೆ ಮತ್ತು ವ್ಯಾಪಾರ ಗುರಿಗಳು ಸೇರಿದಂತೆ ನಮ್ಮ ರಾಷ್ಟ್ರೀಯ ಹಿತಾಸಕ್ತಿ ಯಾವಾಗಲೂ ಅತ್ಯುನ್ನತವಾಗಿರುತ್ತದೆ. ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ದಾಳಿ ಮಾಡಿದಾಗ ಮತ್ತು ನೆರೆಯ ಪ್ರದೇಶಗಳಲ್ಲಿನ ಯುಎಸ್ ನೆಲೆಗಳ ಮೇಲೆ ಹಾಗೂ ಇಸ್ರೇಲ್ ಮೇಲೆ ದಾಳಿ ಮಾಡುವ ಮೂಲಕ ಟೆಹ್ರಾನ್ ಪುನರುಚ್ಚರಿಸಿದಾಗ ಭುಗಿಲೆದ್ದ ಸಂಘರ್ಷದ ನಂತರ ಇಂಧನ ಬೆಲೆಗಳಲ್ಲಿನ ಏರಿಕೆಯ ಕುರಿತು ಅವರು, ಇಂಧನ ಮಾರುಕಟ್ಟೆಗಳ ಲಭ್ಯತೆ, ವೆಚ್ಚಗಳು ಮತ್ತು ಅಪಾಯಗಳನ್ನು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಳ್ಳುವ ಇಂಧನ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ನಮಗೆ, ಭಾರತೀಯ ಗ್ರಾಹಕರ ಹಿತಾಸಕ್ತಿ ಪ್ರಮುಖ ಆದ್ಯತೆಯಾಗಿದೆ ಮತ್ತು ಯಾವಾಗಲೂ ಇರುತ್ತದೆ. ಅಗತ್ಯವಿರುವಲ್ಲಿ, ಈ ಅಸ್ಥಿರ ಪರಿಸ್ಥಿತಿಯಲ್ಲಿ ನಮ್ಮ ಇಂಧನ ಉದ್ಯಮಗಳ ಪ್ರಯತ್ನಗಳನ್ನು ಭಾರತೀಯ ರಾಜತಾಂತ್ರಿಕತೆಯು ಬೆಂಬಲಿಸಿದೆ ಎಂದು ಅವರು ಹೇಳಿದರು.



**ಇರಾನ್ ಧನ್ಯವಾದ ತಿಳಿಸಿದೆ**

ರಾಜ್ಯಸಭೆಯಲ್ಲಿ ನಡೆದ ಚರ್ಚೆಯ ವೇಳೆ ಜೈಶಂಕರ್ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ಅವರು ಐರಿಸ್ ಲಾವನ್ ಹಡಗಿಗೆ ಕೊಚ್ಚಿ ಬಂದರಿನಲ್ಲಿ ಆಶ್ರಯ ನೀಡಿದಕ್ಕಾಗಿ ಭಾರತ ಸರ್ಕಾರಕ್ಕೆ ಧನ್ಯವಾದ ತಿಳಿಸಿದ್ದಾರೆ ಎಂದು ಹೇಳಿದರು. ಇದಕ್ಕೂ ಮೊದಲು ಅಮೆರಿಕಾದ ದಾಳಿಯಲ್ಲಿ ಐರಿಸ್ ಡೆನಾ ಎಂಬ ಮತ್ತೊಂದು ಇರಾನ್ ಹಡಗು ಶ್ರೀಲಂಕಾ ಕರಾವಳಿಯ ಬಳಿ ಮುಳುಗಿ, 87 ಮಂದಿ ಮೃತಪಟ್ಟಿದ್ದಾರೆ.

**ಇರಾನ್‌ನಲ್ಲಿದ್ದ ಭಾರತೀಯರಿಗೆ ಮುನ್ನೆಚ್ಚರಿಕೆ:** ಪಶ್ಚಿಮ ಏಷ್ಯಾದ ಉದ್ವಿಗ್ನತೆ ಹೆಚ್ಚಾಗುತ್ತಿರುವ ಸೂಚನೆಗಳ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಇರಾನ್‌ನಲ್ಲಿದ್ದ ಭಾರತೀಯರಿಗೆ ಎಚ್ಚರಿಕೆ ನೀಡಿತ್ತು. ಜನವರಿಯಲ್ಲಿ ಇರಾನ್‌ಗೆ ಅಗತ್ಯ ವಿಲ್ಲದ ಪ್ರಯಾಣವನ್ನು ತಪ್ಪಿಸಲು ಸೂಚಿಸಲಾಗಿತ್ತು.

ಭಾರತೀಯರು ತಮ್ಮ ವಿವರಗಳನ್ನು ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ರಾಯಭಾರಿ ಕಚೇರಿಯ ವೆಬ್‌ಸೈಟ್ ಮತ್ತು ಸಾಮಾಜಿಕ ಜಾಲತಾಣಗಳನ್ನು ಗಮನಿಸಬೇಕು ಎಂದು ಸಲಹೆ ನೀಡಲಾಗಿತ್ತು.

ಫೆಬ್ರವರಿ 14ರಂದು ರಾಯಭಾರಿ ಕಚೇರಿ ಮತ್ತೊಂದು ಸೂಚನೆ ನೀಡಿ, ಸಾಧ್ಯವಾದ ಎಲ್ಲ ಸಾರಿಗೆ ಮಾರ್ಗಗಳ ಮೂಲಕ ಇರಾನ್ ತೊರೆಯುವಂತೆ ಭಾರತೀಯರಿಗೆ ಮನವಿ ಮಾಡಿತ್ತು. ಫೆಬ್ರವರಿ 23 ರಂದು ಮತ್ತೊಮ್ಮೆ ಇದೇ ಸಲಹೆಯನ್ನು ನೀಡಲಾಯಿತು ಎಂದು ಅವರು ಹೇಳಿದರು.

ಸಂಘರ್ಷ ಪ್ರದೇಶಗಳಲ್ಲಿ ಭಾರತೀಯರೊಂದಿಗೆ ನಿರಂತರ ಸಂಪರ್ಕ

ಸರ್ಕಾರ ಗಲ್ಫ್ ಪ್ರದೇಶದಲ್ಲಿರುವ ಭಾರತೀಯರೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ಹೇಳಿದರು. ಟೆಹ್ರಾನ್‌ನ ಭಾರತೀಯ ರಾಯಭಾರಿ ಕಚೇರಿ ಸಂಪೂರ್ಣವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸಂಘರ್ಷದ ನಡುವೆ ಸಿಲುಕಿರುವ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದೆ. ಕೆಲ ವಿದ್ಯಾರ್ಥಿಗಳನ್ನು ಈಗಾಗಲೇ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಅವರು ತಿಳಿಸಿದರು.

ಕತಾರ್ ಮತ್ತು ಜೋರ್ಡನ್ ಸೇರಿದಂತೆ ಕೆಲವು ದೇಶಗಳಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾಗಿ ಮರಳಿ ತರಲು ಕೂಡ ಕ್ರಮಗಳು ನಡೆಯುತ್ತಿವೆ ಎಂದು ಅವರು ಹೇಳಿದರು.

## ಅನ್ನ ಸುವಿಧಾ ಯೋಜನೆಗೆ ನೋಂದಣಿಗೆ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಅನ್ನ ಸುವಿಧಾ ಯೋಜನೆಯು ರಾಜ್ಯಾದ್ಯಂತ ಅನುಷ್ಠಾನಗೊಂಡಿದ್ದು, 75 ವಯಸ್ಸಿನ ಮೇಲ್ಪಟ್ಟ ಒಂಟಿ ಹಿರಿಯ ನಾಗರೀಕರು ಮಾತ್ರ ಇರುವ ಮನೆಗಳಿಗೆ ಅನ್ನ ಸುವಿಧಾ ಮಾಡ್ಯೂಲ್ನ ಮೂಲಕ ಅರ್ಹ ಫಲಾನುಭವಿಗಳ ಮನೆಯ ಬಾಗಿಲಿಗೆ ಪಡಿತರವನ್ನು ವಿತರಣೆ ಮಾಡಲಾಗುವುದು.

ಜಿಲ್ಲೆಯಲ್ಲಿ ಒಟ್ಟು 15,207 ಫಲಾನುಭವಿಗಳಿದ್ದು 3229 ಫಲಾನುಭವಿಗಳು ಅನ್ನ ಸುವಿಧ ಯೋಜನೆಯಡಿ ನೋಂದಾವಣೆ ಮಾಡಿಕೊಂಡಿರುತ್ತಾರೆ. ಉಳಿದ 11,978 ಪಡಿತರ ಚೀಟಿದಾರರು ಮಾರ್ಚ್ 2026 ರ ಮಾಹೆಯ 1 ರಿಂದ 6ನೇ ತಾರೀಖಿನೊಳಗೆ ನ್ಯಾಯಬೆಲೆ ಅಂಗಡಿಗೆ ತೆರಳಿ ನೋಂದಣಿ ಮಾಡಿಕೊಂಡು ಯೋಜನೆಯ ಪ್ರಯೋಜನೆ ಪಡೆದುಕೊಳ್ಳಬಹುದಾಗಿದೆ.

ಯೋಜನೆಯ ಅನುಕೂಲ ಪಡೆಯಲು ಮೊಬೈಲ್ ಸಂಖ್ಯೆಯನ್ನು ಹೊಂದುವುದು ಕಡ್ಡಾಯವಾಗಿದ್ದು, ಮೊಬೈಲ್ ಸಂಖ್ಯೆಯನ್ನು ನೊಂದಣಿ ಮಾಡಿಸದ ಅರ್ಹ ಫಲಾನುಭವಿಗಳು




ಕೂಡಲೇ ನ್ಯಾಯಬೆಲೆ ಅಂಗಡಿಗೆ ತೆರಳಿ ಇ-ಕೆ.ವೈಸಿ ಮಾಡಿಸಿ ಮೊಬೈಲ್ ಸಂಖ್ಯೆಗಳನ್ನು ಅಪ್ಡೇಟ್ ಮಾಡಿಕೊಂಡಿರಬೇಕು.

ನೊಂದಾಯಿತ ಅರ್ಹ ಫಲಾನುಭವಿಗಳ ಮನೆ ಬಾಗಿಲಿಗೆ ಆಯಾ ತಿಂಗಳ 6 ರಿಂದ 15ನೇ ತಾರೀಖಿನೊಳಗಾಗಿ ಸಂಬಂಧಿಸಿದ ನ್ಯಾಯಬೆಲೆ ಅಂಗಡಿಯಿಂದ ಪಡಿತರವನ್ನು ಪೂರೈಸಲಾಗುವುದು. ಅರ್ಹ ಫಲಾನುಭವಿಗಳು ಸದರಿ ಅನ್ನ ಸುವಿಧಾ ಯೋಜನೆಯ ಸದುಪಯೋಗಪಡಿಸಿಕೊಳ್ಳುವಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕಿನ ಆಹಾರ ಶಿರಸ್ತೇದಾರ್ ಮತ್ತು ಆಹಾರ ನಿರೀಕ್ಷಕರುಗಳನ್ನು ಹಾಗೂ ಜಿಲ್ಲೆಯ ಜಂಟಿ ನಿರ್ದೇಶಕರ ಕಾರ್ಯಾಲಯವನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಠಿಣ ಪರಿಶ್ರಮ -ದೃಢ ಸಂಕಲ್ಪವಿದ್ದರೆ ಯಾವುದೇ ಗುರಿ ಸಾಧ್ಯ

## ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಯಲ್ಲಿ ರಾಷ್ಟ್ರಮಟ್ಟದಲ್ಲಿ 389ನೇ ರ್‍ಯಾಂಕ್ ಪಡೆದ ಮನೋಜ್ ಅಭಿಮತ

• ಪ್ರಜೋದಯ ವರದಿ

**ಸಕಲೇಶಪುರ:** ಕಠಿಣ ಪರಿಶ್ರಮ ಮತ್ತು ದೃಢ ಸಂಕಲ್ಪ ಇದ್ದರೆ ಯಾವುದೇ ಗುರಿಯನ್ನೂ ಸಾಧಿಸಬಹುದು ಎಂದು ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಯಲ್ಲಿ ರಾಷ್ಟ್ರಮಟ್ಟದಲ್ಲಿ 389ನೇ ರ್‍ಯಾಂಕ್ ಪಡೆದು ತಾಲ್ಲೂಕಿಗೆ ಕೀರ್ತಿ ತಂದ ಗುರ್ಜನಹಳ್ಳಿ ಗ್ರಾಮದ ಮನೋಜ್ ಅಭಿಪ್ರಾಯಪಟ್ಟರು.

ಸೋಮವಾರ ಪತ್ರಿಕೆಯೊಂದಿಗೆ ನಡೆದ ಸಂವಾದದಲ್ಲಿ ತಮ್ಮ ಸಾಧನೆಯ ಹಾದಿಯನ್ನು ವಿವರಿಸಿದ ಅವರು, ಗ್ರಾಮೀಣ ಹಿನ್ನೆಲೆಯಿಂದ ಬಂದರೂ ನಿರಂತರ ಅಭ್ಯಾಸ ಮತ್ತು ಸ್ಪಷ್ಟ ಗುರಿಯ ಮೂಲಕ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲು ಸಾಧ್ಯವಾಯಿತು ಎಂದು ಹೇಳಿದರು.

ಬಾಲ್ಯದಲ್ಲೇ ತಾಯಿ ಪೊಲೀಸ್ ಅಧಿಕಾರಿಯಾಗಬೇಕೆಂಬ ಕನಸನ್ನು ಹೊಂದಿದ್ದರು. ಆದರೆ ತಾವು ಸ್ವಲ್ಪ ದೊಡ್ಡವರಾಗುವಷ್ಟರಲ್ಲಿ ತಾಯಿಯನ್ನು ಕಳೆದುಕೊಂಡಿದ್ದು ಆ ಕನಸನ್ನು ನನಸಾಗಿಸುವ ಸಂಕಲ್ಪದಿಂದಲೇ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ಆರಂಭಿಸಿದ್ದೆನೆ ಎಂದು ಮನೋಜ್ ತಿಳಿಸಿದರು.

ಕಾಲೇಜು ದಿನಗಳಲ್ಲಿಯೇ ಈ ಪರೀಕ್ಷೆಗೆ ತಯಾರಿ ಆರಂಭಿಸಿದ್ದರೂ ಮೊದಲ ಎರಡು ಪ್ರಯತ್ನಗಳಲ್ಲಿ ವಿಫಲತೆ ಎದುರಿಸಬೇಕಾಯಿತು.



ಆದರೆ ನಿರಂತರ ಪರಿಶ್ರಮದ ಫಲವಾಗಿ ಮೂರನೇ ಪ್ರಯತ್ನದಲ್ಲಿ ಯಶಸ್ಸು ದೊರಕಿತು ಎಂದು ಅವರು ಹೇಳಿದರು.

ಯುಪಿಎಸ್‌ಸಿ ಪರೀಕ್ಷೆ ಭಾರೀ ಪೈಪೋಟಿಯಿಂದ ಕೂಡಿರುವುದರಿಂದ ಗುರಿ ಸಾಧಿಸಲು ದಿನಕ್ಕೆ ಕನಿಷ್ಠ 12ರಿಂದ 15 ಗಂಟೆಗಳ ಕಾಲ ಅಭ್ಯಾಸ ಮಾಡುತ್ತಿದ್ದೆ. ಪಠ್ಯ ಅಧ್ಯಯನದ ಜೊತೆಗೆ ದೇಶ-ವಿದೇಶದ ಘಟನೆಗಳ ಬಗ್ಗೆ ತಿಳಿದುಕೊಳ್ಳುವುದು, ಹಿರಿಯ ಸಾಧಕರ ಮಾರ್ಗದರ್ಶನ ಪಡೆಯುವುದು ಹಾಗೂ ಆತ್ಮವಿಶ್ವಾಸ ಕಳೆದುಕೊಳ್ಳದೆ ಮುಂದುವರಿಯುವುದು ಅತ್ಯಂತ ಮುಖ್ಯ ಎಂದು ಅವರು ಹೇಳಿದರು.

ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬಂದಿರುವ ಕಾರಣ ದುಬಾರಿ ತರಬೇತಿ ಕೇಂದ್ರಗಳಿಗೆ ಸೇರುವುದು ಸಾಧ್ಯವಾಗಲಿಲ್ಲ. ಆದ್ದರಿಂದ ಕಾಲೇಜು ದಿನಗಳಲ್ಲಿಯೇ ಸ್ವಯಂ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿದ್ದು, ಕಾಲೇಜು ಮುಗಿಯುವ ವೇಳೆಗೆ ಯುಪಿಎಸ್‌ಸಿ ಪ್ರಿಲಿಮಿನರಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೆ. 2023ರಲ್ಲಿ ಇಂಜಿನಿಯರಿಂಗ್ ಶಿಕ್ಷಣ ಪೂರ್ಣಗೊಳಿಸಿದ ಬಳಿಕ ಕಳೆದ ಮೂರು ವರ್ಷಗಳಿಂದ ಕಠಿಣ ಅಭ್ಯಾಸ ನಡೆಸಿ ಈ ಬಾರಿ 389ನೇ ರ್‍ಯಾಂಕ್ ಪಡೆಯಲು ಸಾಧ್ಯವಾಯಿತು ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಸಂದೇಶ ನೀಡಿದ ಅವರು, ಗುರಿ ತಲುಪಲು ಯಾವುದೇ ಶಾರ್ಟ್‌ಕಟ್ ಇಲ್ಲ. ಮೊದಲಿಗೆ ಸ್ಪಷ್ಟ ಗುರಿಯನ್ನು ನಿಗದಿಪಡಿಸಿ, ನಂತರ ಅದನ್ನು ಸಾಧಿಸಲು ಅಗತ್ಯವಾದ ಮಾರ್ಗಗಳನ್ನು ಹುಡುಕಿಕೊಂಡು ನಿರಂತರ ಪರಿಶ್ರಮ ಮಾಡಿದರೆ ಯಶಸ್ಸು ಖಚಿತ ಎಂದು ಸಲಹೆ ನೀಡಿದರು.

## ನಲ್ಲಿ ಕೆಲಸಗಾರರ ಸಂಘದಿಂದ ನಾಳೆ ಜಾಗೃತಿ ಜಾಥಾ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ವಿಶ್ವ ನಲ್ಲಿ ಕೆಲಸಗಾರರ ದಿನದ ಪ್ರಯುಕ್ತ ಮಾ. 11ರಂದು ದಿನಾಚರಣೆ ಹಾಗು ನೀರು ಉಳಿಸಿ ಜೀವ ರಕ್ಷಿಸಿ ಎಂಬ ಶೀರ್ಷಿಕೆಯಡಿ ಜನ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆಯೆಂದು ತಾಲ್ಲೂಕು ನಲ್ಲಿ ಕೆಲಸಗಾರರ ಸಂಘದ ಅಧ್ಯಕ್ಷ ಆಂಥೋನಿ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗೃಹ ಬಳಕೆ, ಕಟ್ಟಡ ನಿರ್ಮಾಣ, ಕೈಗಾರಿಕೆ ಕ್ಷೇತ್ರಗಳಲ್ಲಿ ನೀರಿನ ಯೋಜಿತ ಬಳಕೆಯಿಂದಾಗಿ ಸಂರಕ್ಷಿಸಬೇಕು. ಜಲ ಸಾಕ್ಷರತೆಗೆ ಮಹತ್ವ ನೀಡಬೇಕು. ವರ್ಷದಿಂದ ವರ್ಷಕ್ಕೆ ನೀರಿನ ಪ್ರಮಾಣ ಕ್ಷೀಣಿಸುತ್ತಿದೆ. ಜಲ ಜಾಗೃತಿ ಮೂಲಕ ಜೀವಜಲ ಸಂರಕ್ಷಿಸಬೇಕಾಗಿದೆಯೆಂದರು.

ಈ ನಿಟ್ಟಿನಲ್ಲಿ ತಾಲ್ಲೂಕು ನಲ್ಲಿ ಕೆಲಸಗಾರರ ಸಂಘದಿಂದ ವಿಶ್ವ ನಲ್ಲಿ



ಕೆಲಸಗಾರರ ದಿನದಂದು ನೀರು ಉಳಿಸಿ ಜೀವ ರಕ್ಷಿಸಿ ಎಂಬ ಘೋಷವಾಕ್ಯದೊಂದಿಗೆ ಪಟ್ಟಣದ ಡಾ. ಬಿ.ಆರ್.ಅಂಬೇಡ್ಕರ್ ಭವನದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕರಪತ್ರ ಹಂಚುವ ಮೂಲಕ ಜಾಗೃತಿ ಮೂಡಿಸಲಾಗುವುದೆಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಬಿಜೆಪಿ ಮುಖಂಡ ಸಿ.ಆರ್.ಚಿದಾನಂದ್, ನಲ್ಲಿ ಕೆಲಸಗಾರರ ಸಂಘದ ರಾಜ್ಯಾಧ್ಯಕ್ಷ ಮಹೇಶ್ ಮತ್ತಿತರರು ಭಾಗವಹಿಸಲಿದ್ದಾರೆಂದರು.

ಕಾರ್ಮಿಕ ಇಲಾಖೆ ವತಿಯಿಂದ ದೊರೆಯುವ ಸೌಲಭ್ಯಗಳು, ಪಿಂಚಣಿ ಹಾಗು ಸದಸ್ಯರ ನೋಂದಣಿಗೆ ಮಾಹಿತಿ ನೀಡಲಾಗುವುದು. ತಾಲ್ಲೂಕಿನ ನಲ್ಲಿ ಕೆಲಸಗಾರರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿದರು.

ಸಂಘದ ಉಪಾಧ್ಯಕ್ಷ ನಿಂಗೇಗೌಡ, ಖಜಾಂಚಿ ಲಕ್ಷ್ಮೀಶ್, ಸಹ ಕಾರ್ಯದರ್ಶಿ ಎನ್.ರಾಜು, ನಿರ್ದೇಶಕರಾದ ಸಿ.ಕೆ.ರಘು, ಸಂದೇಶ್, ಸ್ವಾಮಿ, ಅರುಣೇಶ್, ಸಿ.ಆರ್.ಮಂಜುನಾಥ್ ಇನ್ನಿತರರು ಹಾಜರಿದ್ದರು.

## ಪೌರಾಣಿಕ ನಾಟಕಗಳು ನಶಿಸದಂತೆ ಕಾಪಾಡಬೇಕು

• ಪ್ರಜೋದಯ ವರದಿ

**ಅರಕಲಗೂಡು:** ಸಮಾಜದ ಜನರ ನಡುವೆ ಸಾಮರಸ್ಯದ ಪ್ರತೀಕದಂತಿರುವ ಪೌರಾಣಿಕ ನಾಟಕ ಕಲೆಗಳು ನಶಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಕಿಸಾನ್ ಅಧ್ಯಕ್ಷ ಸಿ.ಡಿ.ದಿವಾಕರಗೌಡ ತಿಳಿಸಿದರು.

ತಾಲ್ಲೂಕಿನ ಶಣವಿನಕುಪ್ಪೆ ಗ್ರಾಮದಲ್ಲಿ ಶ್ರೀ ವೀರಾಂಜನೇಯ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ಭಾನುವಾರ ಸಂಜೆ ಹಮ್ಮಿಕೊಂಡಿದ್ದ ರಾಜ ಸತ್ಯವ್ರತ ಅಥವಾ ಶನಿ ಪ್ರಭಾವ ಅಥವ ಚಂದ್ರಹಾಸೆಯ ಮಾಂಗಲ್ಯ ಸತ್ವ ಪರೀಕ್ಷೆ ಪೌರಾಣಿಕ ನಾಟಕ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನೈಜ ಅಭಿನಯ ಪ್ರಪಂಚದಲ್ಲಿ ಪೌರಾಣಿಕ ನಾಟಕಗಳಿಗೆ ಹೆಚ್ಚಿನ ಮಹತ್ವವಿದೆ. ಹಳ್ಳಿಗಳಲ್ಲಿ ಇಂದಿಗೂ ಸತ್ಯ, ನ್ಯಾಯ, ನಿಷ್ಠೆ



ಉಳಿದಿದೆ ಎಂದರೆ ಪೌರಾಣಿಕ ನಾಟಕಗಳು ಕಾರಣವಾಗಿದ್ದು ಇಂತಹ ಕಲೆಗಳನ್ನು ಉಳಿಸಿ ಬೆಳೆಸುವುದು ಅತ್ಯಗತ್ಯವಾಗಿದೆ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಪೌರಾಣಿಕ ನಾಟಕ ಸಮಾರಂಭಗಳನ್ನು ನಡೆಸಲು ಜಾಗದ ಕೊರತೆ ಇದ್ದು ಹೆಚ್ಚಿನದಾಗಿ ಊರ ಹೊರಗಿನ ಪ್ರದೇಶದಲ್ಲಿ ವೇದಿಕೆ ಹಾಕುವಂತಾಗಿದೆ. ಆದರೆ ಶಣವಿನಕುಪ್ಪೆ ಗ್ರಾಮದಲ್ಲಿ ಶ್ರೀ ಅಂಜನೇಯಸ್ವಾಮಿ ದೇವಾಲಯ ಸನ್ನಿಧಿಯ ಹೃದಯ ಭಾಗದಲ್ಲಿ ವಿಶಾಲವಾದ ಜಾಗ ಉಳಿಸಿಕೊಂಡಿರುವುದು ಹೆಮ್ಮೆಯ ಸಂಗತಿ. ಇಂತಹ ಜಾಗಗಳನ್ನು ಧಾರ್ಮಿಕ ಕಾರ್ಯಗಳಿಗೆ ಸುರಕ್ಷಿತವಾಗಿ ಉಳಿಸಿಕೊಳ್ಳಬೇಕಿದೆ ಎಂದು ತಿಳಿಸಿದರು.

ತಾಪಂ ಮಾಜಿ ಅಧ್ಯಕ್ಷ ಎಚ್. ಮಾದೇಶ್, ಮುಖಂಡರಾದ ಗುರಪ್ಪ, ಗಣೇಶ್ ವೇಲಾಪುರಿ, ಉದೇಶ್, ಸೀತಾರಾಮ್, ಕಿರಣ್ ಅರಸ್, ಮಲ್ಲೇಶ್, ಈಶ್ವರ್, ಪಟೇಲ್ ಜಗದೀಶ್, ಕುಮಾರ್, ಮಂಜುನಾಥ, ಮೋಹನ, ಪುಟ್ಟರಾಜು, ನವೀನ್ ಕುಮಾರ್, ರಾಜೇಗೌಡ ಹಾಗೂ ಗ್ರಾಮಸ್ಥರು ಹಾಜರಿದ್ದರು.

# ಹೆತ್ತವರು, ಗುರು- ಹಿರಿಯರ ರೂಪದಲ್ಲೂ ದೇವರು ನೆಲೆಸಿರುತ್ತಾನೆ

## ಸನ್ಮಾರ್ಗದಲ್ಲಿ ನಡೆದ ಮನುಷ್ಯನ ಪಾಪ -ಪುಣ್ಯಗಳು ಮುಕ್ತಿಯ ನಂತರವೂ ಭಗವಂತನ ಮುಂದೆ ಪರಿಚಯಿಸುತ್ತದೆ

• ಪ್ರಜೋದಯ ವರದಿ

**ಅರಸೀಕೆರೆ:** ಶ್ರದ್ಧೆ ಭಕ್ತಿಯಿಂದ ಗಳಿಸಿ ಸನ್ಮಾರ್ಗದಲ್ಲಿ ನಡೆದ ಮನುಷ್ಯನ ಪಾಪ -ಪುಣ್ಯಗಳು ಮುಕ್ತಿಯ ನಂತರವೂ ಬುತ್ತಿಯಾಗಿ ಭಗವಂತನ ಮುಂದೆ ನಿಮ್ಮನ್ನು ಪರಿಚಯಿಸುತ್ತದೆ ಎಂದು ಹಾಸನ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಶಂಭುನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಗಂಡಸಿ ಹೋಬಳಿ, ಬಾಗೇಶಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಮೈಸೂರಮ್ಮ ದೇವಿಯ ನೂತನ ಆಲಯ, ಬಿಂಬ, ವಿಮಾನ ಗೋಪುರದ ಕಳಸ ಸ್ಥಾಪನೆ, ಮಹೋತ್ಸವದ ಧಾರ್ಮಿಕ ಸಮಾರಂಭದಲ್ಲಿ ಪಾಲ್ಗೊಂಡು ಭಕ್ತರಿಗೆ ಆಶೀರ್ವಚನ ನೀಡಿದರು.

ದೇವರು ಗುಡಿಯಲ್ಲಿ ಮಾತ್ರ



ನೆಲೆಸಿರುವುದಿಲ್ಲ ಮನೆಯಲ್ಲಿ ಹೆತ್ತವರು ಗುರು ಹಿರಿಯರ ರೂಪದಲ್ಲೂ ನೆಲೆಸಿರುತ್ತಾನೆ, ದೇವಾಲಯದ ದೇವರು ಪೂಜೆ, ಜಪ ತಪಗಳಿಗೆ ಒಲಿದರೆ, ಮನೆಯಲ್ಲಿರುವ ದೇವರನ್ನ ಪ್ರೀತಿ ಮತ್ತು ಗೌರವ ಭಾವದಿಂದ ಕಂಡರೆ ಸಾಕು ಸುಲಭವಾಗಿ ಭಗವಂತನನ್ನು ಒಲಿಸಿಕೊಳ್ಳಬಹುದು ಎಂದು ಕಿವಿಮಾತು ಹೇಳಿದರು.

ಬಾಗೇಶಪುರ ಗ್ರಾಮಸ್ಥರೆಲ್ಲರೂ ಸೇರಿ ಮೈಸೂರಮ್ಮ ದೇವಿಯ ನೂತನ ದೇವಾಲಯವನ್ನ ನಿರ್ಮಿಸಿ ದೇವಾಲಯದ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಗ್ರಾಮದ ಎಲ್ಲಾ ದೇವತೆಗಳನ್ನು ಸಂಪ್ರದಾಯದಂತೆ ಕರೆತಂದು ಜಪಾ ತಪ್ಪಾ ಯಜ್ಞ ಯಾಗಾದಿಗಳೊಂದಿಗೆ ಶಾಸ್ತ್ರೋಕ್ತವಾಗಿ ನಡೆಸುತ್ತಿರುವುದು ಸಂತಸದ ವಿಷಯವಾಗಿದೆ ಮೈಸೂರಮ್ಮ ದೇವಿ ಹಾಗೂ ಗ್ರಾಮ ದೇವತೆಗಳ ಸಮೇತ ಭೈರವೇಕ್ಯ ಡಾ.ಬಾಲ ಗಂಗಾಧರ ನಾಥ ಮಹಾಸ್ವಾಮೀಜಿಗಳ ದಿವ್ಯ ಅನುಗ್ರಹ ತಮ್ಮೆಲ್ಲರ ಮೇಲಿರಲಿ ಎಂದು ಆಶೀರ್ವದಿಸಿದರು,

ಇದಕ್ಕೂ ಮುನ್ನ ಧಾರ್ಮಿಕ ಸಮಾರಂಭದಲ್ಲಿ ಪಾಲ್ಗೊಂಡ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಆದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಮಾತನಾಡಿ, ದೇವಾಲಯದ ನಿರ್ಮಾಣಕ್ಕೆ ಈಗಾಗಲೇ 10 ಲಕ್ಷ ನೀಡಿದ್ದು ಅಗತ್ಯವಿದ್ದರೆ ದೇವಾಲಯದ ಅಭಿವೃದ್ಧಿಗೆ ಮತ್ತಷ್ಟು ಅಳಿಲು ಸೇವೆ ಸಲ್ಲಿಸಲು ನಾನು ಸಿದ್ದನಿರುವುದಾಗಿ ಎಂದು ಅವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಆದಿ ಚುಂಚನಗಿರಿ ಮಹಾಸಂಸ್ಥಾನ ಬೊಮ್ಮಾಚಿಹಳ್ಳಿ ಶಾಖಾ ಮಠದ ಶಿವಾನಂದ ಸ್ವಾಮೀಜಿ, ಗ್ರಾಮದ ಮುಖಂಡರು ಹಾಗೂ ದೇವಾಲಯದ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳಾದ ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಶೋಭಾ ಶಿವಣ್ಣ, ಮರಿಯಪ್ಪ, ಮೇಲೆಗೌಡ್ರು,ಗೌಡಪ್ಪ, ಕುಮಾರ, ಮಂಜುನಾಥ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಬಾಲ್ಯದಿಂದಲೇ ಭಾರತೀಯ ಸಂಸ್ಕೃತಿ, ಸಂಸ್ಕಾರ ಮನೆ ಮಾಡಲಿ

## ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಹೆಚ್ಚು: ನಾಗರತ್ನ

• ಪ್ರಜೋದಯ ವರದಿ

**ಹಾಸನ:** ಭಾರತೀಯ ಸಂಸ್ಕೃತಿ, ಸಂಸ್ಕಾರ ಮಕ್ಕಳಲ್ಲಿ ಬಾಲ್ಯದಿಂದಲೇ ಮನೆ ಮಾಡಲಿ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪ್ರೀತಂ ಗೌಡ ಅವರ ತಾಯಿ ನಾಗರತ್ನ ಜವರೇಗೌಡ ಅವರು ಆಶಿಸಿದರು.

ನಗರದ ಬೂವನಹಳ್ಳಿ ಕೂಡು ಬಳಿ ಇರುವ ಶ್ರೀ ರಂಗನಾಥ ಸ್ವಾಮಿ ಹಿರಿಯ ಪ್ರಾಥಮಿಕ. ಶಾಲೆಯ ಮಾತೃಭೋಜನ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಅವರು ಮಾತನಾಡಿ, ಮಾತೃ ಭೋಜನ ಅಮ್ಮ ಮತ್ತು ಮಗುವಿನ ನಡುವೆ ಬಾಂಧವ್ಯ ಹೆಚ್ಚಿಸುವಂತಹ



ಹಾಗೂ ಮಗುವಿನ ಜೀವನದಲ್ಲಿ ತಂದೆ ತಾಯಿಯ ಪಾತ್ರ ಎಷ್ಟು ಗಮನಾರ್ಹವಾಗಿರುತ್ತದೆಂದು ಈ ಕಾರ್ಯಕ್ರಮ ತೋರಿಸುತ್ತಿದೆ ಎಂದರು.

ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗಿ ಅನ್ಯ ಸಂಸ್ಕೃತಿಯನ್ನು ಅನುಸರಿಸುತ್ತಿರುವ ಈ ಕಾಲದಲ್ಲಿ ನಮ್ಮ ಹಿಂದೂ ಧರ್ಮದ ಸಂಸ್ಕೃತಿಯನ್ನು ಎತ್ತಿ ಹಿಡಿಯುವಂತಹ ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರು ಹೆಚ್ಚು ಪ್ರಮುಖ ಎಂಬುದನ್ನು ಈ ಕಾರ್ಯಕ್ರಮದ ಮೂಲಕ ತಿಳಿಸುವ ಕಾರ್ಯವನ್ನು ಈ ಶಾಲೆಯ ಎಲ್ಲಾ ಶಿಕ್ಷಕರು ಪಾಠದೊಡನೆ ಈ ಕಾರ್ಯಕ್ರಮದ ಮೂಲಕ ಮನಮುಟ್ಟುವಂತೆ ತಿಳಿಯಪಡಿಸುವ ಪ್ರಯತ್ನ ಮಾಡಿದ್ದಾರೆ ಎಂದು ಅವರು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ರಂಗಭೂಮಿ ಕಲಾವಿದೆ ಪೂಜಾ ರಘುನಂದನ್ ಮತ್ತು ರಾಷ್ಟ್ರ ಸೇವಾ ಸಮಿತಿ, ಜಿಲ್ಲಾ ಸಹ ಕಾರ್ಯವಾಹಿಕರಾದ ಮಮತ ಮಂಜುನಾಥ್, ಸಂಸ್ಥೆಯ ಕಾರ್ಯದರ್ಶಿ ಬಿ.ವಿ. ಶ್ರೀನಿವಾಸ್, ಶಾಲಾ ಸಮಿತಿ ಸದಸ್ಯರು, ಮುಖ್ಯಶಿಕ್ಷಕರು ಹಾಗೂ ಶಿಕ್ಷಕ ವೃಂದ, ಸಿಬ್ಬಂದಿ ವರ್ಗ ಪೋಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬೆಂಕಿ ಹಚ್ಚಿ ಪತ್ನಿ ಕೊಲೆ

ಮೊದಲನೇ ಪುಟದಿಂದ

ಬಳಿಕ ಗಲಾಟೆ ಮತ್ತೆ ವಿಕೋಪಕ್ಕೆ ತಿರು ಗಿದ್ದು, ಮಧ್ಯರಾತ್ರಿ ವೇಳೆಗೆ ಚಂದ್ರಾಚಾರ್ ಅವರು ಪತ್ನಿ ಸುಮಿತ್ರ ಅವರನ್ನು ಮನೆ ಹೊರಗೆ ಎಳೆದುಕೊಂಡು ಹೋಗಿ ಮನೆಯ ಲ್ಲಿದ್ದ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿರುವು ದಾಗಿ ತಿಳಿದು ಬಂದಿದೆ.

ಮಧ್ಯರಾತ್ರಿ ಸುಮಾರು 1 ಗಂಟೆ ವೇಳೆಗೆ ಮನೆಯ ಹೊರಗಡೆ ಕಿರುಚಾಟದ ಶಬ್ದ ಕೇಳಿ ಸೊಸೆ ಚೈತ್ರಾ, ಹೊರಗೆ ಹೋಗಿ ನೋಡಿದಾಗ ಸುಮಿತ್ರ ಅವರು ಬೆಂಕಿಯಲ್ಲಿ ಚಿರುಚಾಡುತ್ತಿ ರುವ ದೃಶ್ಯ ಕಂಡು ಬೆಚ್ಚಿಬಿದ್ದಿದ್ದಾರೆ. ತಕ್ಷಣ ಕೂಗಾಡಿದಾಗ ಪುತ್ರ ಶಿವರಾಜ್ ಸ್ಥಳಕ್ಕೆ ಧಾವಿಸಿ ನೀರು ಹಾಕಿ ಬೆಂಕಿಯನ್ನು ನಂದಿಸಿದ್ದಾರೆ.

ಗಂಭೀರವಾಗಿ ಸುಟ್ಟ ಗಾಯಗಳಾಗಿದ್ದ ಸುಮಿತ್ರ ಅವರನ್ನು ತಕ್ಷಣವೇ ಆ್ಯಂಬುಲೆನ್ಸ್ ಮೂಲಕ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಶರೀರದ ಬಹುತೇಕ ಭಾಗ ಸುಟ್ಟು ಹೋಗಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಈ ಸಂಬಂಧ ಆಲೂರು ಪೊಲೀಸ್ ಠಾಣೆ ಯಲ್ಲಿ ದೂರು ದಾಖಲಿಸಿದ್ದು, ಆರೋಪಿ ಚಂದ್ರಾಚಾರ್ ಅವರನ್ನು ಬಂಧಿಸಿರುವ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಹೆಚ್ಚಿನ ತನಿಖೆ ಮುಂದುವರೆಸಿದ್ದಾರೆ. ಗ್ರಾಮದಲ್ಲಿ ನಡೆದ ಈ ಹೃದಯ ವಿದ್ರಾವಕ ಘಟನೆ ಸ್ಥಳೀಯರಲ್ಲಿ ಆತಂಕ ಹಾಗು ಆಕ್ರೋಶಕ್ಕೆ ಕಾರಣವಾಗಿದೆ.

## ತೋಟಗಾರಿಕೆ ತರಬೇತಿಗೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ತೋಟಗಾರಿಕೆ ತರಬೇತಿ ಕೇಂದ್ರ, ಸೋಮನಹಳ್ಳಿ ಕಾವಲು ಕೇಂದ್ರದಲ್ಲಿ 10 ತಿಂಗಳ ತೋಟಗಾರಿಕೆ ತರಬೇತಿಗೆ ಹಾಸನ ಜಿಲ್ಲೆಯ ರೈತರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಯು ಕನಿಷ್ಠ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು. ತಂದೆ ತಾಯಿ ಅಥವಾ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು. ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳು ಕನಿಷ್ಠ 18 ರಿಂದ 33 ವರ್ಷದೊಳಗಿರಬೇಕು. ಮಾಜಿ ಸೈನಿಕರಿಗೆ 33 ರಿಂದ ಗರಿಷ್ಠ 65 ವರ್ಷ ಹಾಗೂ ಇತರೆ ಅಭ್ಯರ್ಥಿಗಳು 18 ರಿಂದ 30 ವರ್ಷದೊಳಗಿರಬೇಕು.

ಅರ್ಜಿ ನಮೂನೆಯನ್ನು ಇಲಾಖಾ ವೆಬ್ ಸೈಟ್ https://horticulturedir.karnataka.gov.in ನಲ್ಲಿ ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ, ಹಾಸನ ಕಛೇರಿಯಲ್ಲಿ ಪಡೆಯಬಹುದು.

ಅರ್ಜಿ ಶುಲ್ಕದ ಬಾಬ್ತು ಸಾಮಾನ್ಯ ಅಭ್ಯರ್ಥಿಗಳಿಗೆ ರೂ. 30 ಮತ್ತು ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ/ ಮಾಜಿ ಸೈನಿಕ ಅಭ್ಯರ್ಥಿಗಳಿಗೆ 15 ರೂ. ಗಳ ಮೊತ್ತಕ್ಕೆ ಇಂಡಿಯನ್ ಪೋಸ್ಟಲ್ ಆರ್ಡರ್ ಡಿಮ್ಯಾಂಡ್ ಡ್ರಾಫ್ಟ್ ಮುಖೇನ ತೋಟಗಾರಿಕೆ ಜಂಟಿ ನಿರ್ದೇಶಕರು, (ಜಿ.ಪಂ.), ಹಾಸನ ರವರ ಹೆಸರಿನಲ್ಲಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಏ.15 ಸಂಜೆ 5.30 ಗಂಟೆಯೊಳಗೆ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ, ರಾಜ್ಯವಲಯ, ಹಾಸನ ರವರ ಕಛೇರಿ ಅಥವಾ ದೂರವಾಣಿ ಸಂಖ್ಯೆ 990103372 / 9481350318 ಅನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

## ರಾಜ್ಯದ 26 ಜಿಲ್ಲೆಗಳಲ್ಲಿ ಜಿಡಿಪಿ ಕುಸಿತ: ವಿಪಕ್ಷ ನಾಯಕ ಆರ್.ಅಶೋಕ್ ಕಿಡಿ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ 26 ಜಿಲ್ಲೆಗಳ ತಲಾ ಆದಾಯ ರಾಜ್ಯದ ಸರಾಸರಿ ತಲಾ ಆದಾಯಕ್ಕಿಂತ ಕೆಳಗಿರುವುದು ಪ್ರಾದೇಶಿಕ ಅಸಮಾನತೆ ಎಷ್ಟು ಗಂಭೀರವಾಗಿದೆ ಎಂಬುದಕ್ಕೆ ಕನ್ನಡಿ ಹಿಡಿದಂತಾಗಿದೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ್ ಅವರು ತಿಳಿಸಿದ್ದಾರೆ.

ಈ ಸಂಬಂಧ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಕರ್ನಾಟಕದ 31 ಜಿಲ್ಲೆಗಳ ಪೈಕಿ ಕೇವಲ 5 ಜಿಲ್ಲೆಗಳು ರಾಜ್ಯದ ಸರಾಸರಿ ತಲಾದಾಯಕ್ಕಿಂತ ಹೆಚ್ಚು ತಲಾದಯ ಹೊಂದಿವೆ ಎಂದಿದ್ದಾರೆ.

ಅದರಲ್ಲೂ ಕಲ್ಯಾಣ ಕರ್ನಾಟಕದ 5 ಜಿಲ್ಲೆಗಳು ಈ ಪಟ್ಟಿಯಲ್ಲಿ ಕಟ್ಟಕಡೆಯ ಸ್ಥಾನ ಪಡೆದಿದ್ದು, ಈ ಜಿಲ್ಲೆಗಳ ತಲಾದಾಯ ರಾಜ್ಯದ ಸರಾಸರಿ ತಲಾದಾಯಕ್ಕಿಂತ ಅರ್ಧದಷ್ಟು ಕಡಿಮೆ ಇರುವುದು ಅತ್ಯಂತ ಚಿಂತಾಜನಕ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ.



ದಿನ ಬೆಳಗಾದರೆ ಭೌಗೋಳಿಕ ರಾಜಕೀಯದ ಬಗ್ಗೆ ಪ್ರವಚನ ಮಾಡುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಅವರ ಸುಪುತ್ರ ಪ್ರಿಯಾಂಕ್ ಖರ್ಗೆ ಅವರು ದಶಕಗಳಿಂದ ಅಧಿಕಾರ ಅನುಭವಿಸುತ್ತಾ ಕಲ್ಯಾಣ ಕರ್ನಾಟಕ ಭಾಗದ ಜನರ ಹೊಟ್ಟೆ ಮೇಲೆ ಹೊಡೆಯುತ್ತಿರುವ ಅಸಲಿ ಸರ್ವಾಧಿಕಾರಿಗಳು ಯಾರು? ಎಂದು ಪ್ರಶ್ನಿಸಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗವನ್ನು ಆರ್ಥಿಕ ಗುಲಾಮಗಿರಿಗೆ ತಳ್ಳಿದವರು ಯಾರು? ಈ ಪ್ರಶ್ನೆಗಳಿಗೆ ಉತ್ತರಿಸುತ್ತಾರಾ? ಎಂದು ಅಶೋಕ್ ಅವರು ಕೇಳಿದ್ದಾರೆ.

## ನೈಜ ಜಗತ್ತಿನ ಆರ್ಥಿಕತೆಗೆ ಸಂಪರ್ಕಿಸುವ ಪ್ರಕ್ರಿಯೆಯನ್ನು ವೇಗಗೊಳಿಸಬೇಕು: ಪ್ರಧಾನಿ ಮೋದಿ

# ಶಿಕ್ಷಣ ವ್ಯವಸ್ಥೆಯಲ್ಲಿ ಕೃತಕ ಬುದ್ಧಿಮತ್ತೆಯತ್ತ ಗಮನಹರಿಸುವ ಅಗತ್ಯವಿದೆ

• ಪ್ರಜೋದಯ ವರದಿ

**ನವದೆಹಲಿ:** ಕೃತಕ ಬುದ್ಧಿಮತ್ತೆ ಮತ್ತು ಯಾಂತ್ರೀಕರಣದಂತಹ ವಿಷಯಗಳ ಮೇಲೆ ಗಮನ ಹರಿಸುವುದರ ಜೊತೆಗೆ, ದೇಶದ ಶಿಕ್ಷಣ ಕ್ಷೇತ್ರವನ್ನು ನೈಜ ಜಗತ್ತಿನ ಆರ್ಥಿಕತೆಗೆ ಸಂಪರ್ಕಿಸುವ ಪ್ರಕ್ರಿಯೆಯನ್ನು ವೇಗಗೊಳಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದರು.

ಬಜೆಟ್ ನಂತರದ ವೆಬಿನಾರ್ ಅನ್ನು ಉದ್ದೇಶಿಸಿ ಮಾತನಾಡಿದ ಅವರು, ಜನರ ಆಕಾಂಕ್ಷೆಗಳನ್ನು ಈಡೇರಿಸುವುದು ತಮ್ಮ ಸರ್ಕಾರದ ಸಂಕಲ್ಪ ಮತ್ತು ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಆರೋಗ್ಯ, ಪ್ರವಾಸೋದ್ಯಮ, ಕ್ರೀಡೆ ಮತ್ತು ಸಂಸ್ಕೃತಿ ಅವುಗಳನ್ನು ಪೂರೈಸುವ ಮಾಧ್ಯಮವಾಗಿ ಕಾರ್ಯನಿರ್ವಹಿಸುವ ಕೆಲವು ಕ್ಷೇತ್ರಗಳಾಗಿವೆ ಎಂದು ಹೇಳಿದರು.

ಜನರ ಆಕಾಂಕ್ಷೆಗಳನ್ನು ಈಡೇರಿಸುವುದು ಕೇವಲ ಒಂದು ವಿಷಯವಲ್ಲ, ಆದರೆ ಅದು ಈ ಸರ್ಕಾರದ ಪ್ರಮುಖ ಉದ್ದೇಶ ಮತ್ತು ನಿರ್ಣಯವಾಗಿದೆ ಎಂದ ಅವರು, ವಿವಿಧ ಸರ್ಕಾರಿ ಸಚಿವಾಲಯಗಳು, ಇಲಾಖೆಗಳು ಮತ್ತು ಖಾಸಗಿ ವಲಯಗಳ ತಜ್ಞರು ಭಾಗವಹಿಸಿದ್ದ ವೆಬಿನಾರ್‌ನಲ್ಲಿ ಹೇಳಿದರಲ್ಲದೆ, ಶಿಕ್ಷಣ, ಕೌಶಲ್ಯ, ಆರೋಗ್ಯ, ಪ್ರವಾಸೋದ್ಯಮ, ಕ್ರೀಡೆ, ಸಂಸ್ಕೃತಿ ಮೂಲಭೂತ ಕ್ಷೇತ್ರಗಳು ಮತ್ತು ಈ ಸಾರ್ವಜನಿಕ ಆಕಾಂಕ್ಷೆಗಳನ್ನು ಈಡೇರಿಸುವ ಪ್ರಮುಖ ಸಾಧನಗಳಾಗಿವೆ ಎಂದು ಹೇಳಿದರು.

ನಮ್ಮ ಶಿಕ್ಷಣ ವ್ಯವಸ್ಥೆಯನ್ನು ನೈಜ ಜಗತ್ತಿನ ಆರ್ಥಿಕತೆಗೆ ಸಂಪರ್ಕಿಸುವ ಪ್ರಕ್ರಿಯೆಯನ್ನು ನಾವು ಇನ್ನಷ್ಟು ವೇಗಗೊಳಿಸಬೇಕಾಗಿದೆ. ಮತ್ತು ಯಾಂತ್ರೀಕರಣ, ಡಿಜಿಟಲ್ ಆರ್ಥಿಕತೆ ಮತ್ತು ವಿನ್ಯಾಸ-ಚಾಲಿತ



ಉತ್ಪಾದನೆಯಂತಹ ವಿಷಯಗಳ ಕುರಿತು, ನಾವು ನಮ್ಮ ಗಮನವನ್ನು ಇನ್ನಷ್ಟು ಹೆಚ್ಚಿಸಬೇಕಾಗಿದೆ ಎಂದು ಅವರು ತಿಳಿಸಿದರು.

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಎಂದ ಅವರು, ನಮ್ಮ ದೇಶದ ಹೆಣ್ಣುಮಕ್ಕಳು ಎಐನಲ್ಲಿ ಹೆಚ್ಚಿನ ಆಸಕ್ತಿ ಹೊಂದಿರುವುದು ಹೃದಯಸ್ಪರ್ಶಿಯಾಗಿದೆ. ಇಂದು, ನಾವು ಭವಿಷ್ಯದ ತಂತ್ರಜ್ಞಾನಗಳ ಬಗ್ಗೆ ಮಾತನಾಡುವಾಗ, ಅವಕಾಶಗಳ ಕೊರತೆಯಿಂದಾಗಿ ಯಾವುದೇ ಹೆಣ್ಣುಮಗಳು ಹಿಂದೆ ಸರಿಯಬಾರದು ಎಂಬುದು ಮುಖ್ಯ. ಯುವ ಸಂಶೋಧಕರು ಹೊಸ ಆಲೋಚನೆಗಳ ಮೇಲೆ ಕೆಲಸ ಮಾಡಲು ಸಾಕಷ್ಟು ಅವಕಾಶಗಳನ್ನು ಪಡೆಯುವ ಸಂಶೋಧನಾ ಪರಿಸರ ವ್ಯವಸ್ಥೆಯನ್ನು ನಾವು ರಚಿಸಬೇಕು ಎಂದು ಅವರು ಹೇಳಿದರು.

ಆರೋಗ್ಯ ಕ್ಷೇತ್ರವನ್ನು ಬಲಪಡಿಸಲಾಗಿದೆ, ಆಯುಷ್ಮಾನ್ ಭಾರತ್ ಯೋಜನೆ ಮತ್ತು ಆರೋಗ್ಯ ಮಂದಿರಗಳು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳ ಹೆಚ್ಚಿನ ನುಗ್ಗುವಿಕೆಗೆ ಕಾರಣವಾಗಿವೆ ಎಂದು ಅವರು ಹೇಳಿದರು.ತರಬೇತಿ ಪಡೆದ ಆರೈಕೆದಾರರು ಹಿರಿಯ ನಾಗರಿಕರಿಗೆ ಸಹಾಯ ಮಾಡುವ ಆರೈಕೆ ಆರ್ಥಿಕತೆಯನ್ನು ಉಲ್ಲೇಖಿಸಿದ ಮೋದಿ, ಹಿರಿಯ ನಾಗರಿಕರ ಜನಸಂಖ್ಯೆ ಹೆಚ್ಚಾದಂತೆ, ಆರೈಕೆದಾರರ ಬೇಡಿಕೆಯೂ ಹೆಚ್ಚಾಗುತ್ತದೆ ಎಂದು ಹೇಳಿದರು.

ಹೊಸ ತರಬೇತಿ ಮಾದರಿಗಳನ್ನು ಅಭಿವೃದ್ಧಿಪಡಿಸಬೇಕು ಎಂದು ನಾನು ವಿನಂತಿಸುತ್ತೇನೆ ಎಂದು ಅವರು ಹೇಳಿದರು. ಭಾರತವು ಇಂದು ತಡೆಗಟ್ಟುವಿಕೆ ಮತ್ತು ಸಮಗ್ರ ಆರೋಗ್ಯದ ದೃಷ್ಟಿಕೋನದ ಮೇಲೆ ಕೆಲಸ ಮಾಡುತ್ತಿದೆ ಮತ್ತು ಕಳೆದ ಕೆಲವು ವರ್ಷಗಳಿಂದ ದೇಶದ ಆರೋಗ್ಯ ಮೂಲಸೌಕರ್ಯವನ್ನು ಬಲಪಡಿಸಲಾಗಿದೆ ಎಂದು ಪ್ರಧಾನಿ ಹೇಳಿದರು.

ನೂರಾರು ಜಿಲ್ಲೆಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳು ತೆರೆದಿವೆ ಮತ್ತು ಆಯುಷ್ಮಾನ್ ಭಾರತ್ ಯೋಜನೆಯ ಮೂಲಕ, ಆರೋಗ್ಯ ಕೇಂದ್ರಗಳ ಮೂಲಕ ಹಳ್ಳಿಗಳಿಗೂ ಆರೋಗ್ಯ ಸೇವೆಗಳ ಪ್ರವೇಶವನ್ನು ವಿಸ್ತರಿಸಲಾಗಿದೆ ಎಂದು ಅವರು ಹೇಳಿದರು. ದೇಶದ ಯುವ ಶಕ್ತಿಯ ಬಗ್ಗೆಯೂ ಮೋದಿ ಮಾತನಾಡಿದರು ಮತ್ತು ಅದು ಆರೋಗ್ಯಕರ, ಶಿಸ್ತುಬದ್ಧ ಮತ್ತು ಆತ್ಮವಿಶ್ವಾಸದಿಂದ ತುಂಬಿದಾಗ ಮಾತ್ರ ಅದು ರಾಷ್ಟ್ರೀಯ ಶಕ್ತಿಯಾಗುತ್ತದೆ ಎಂದರು.

ಅದಕ್ಕಾಗಿಯೇ, ಕಳೆದ ಕೆಲವು ವರ್ಷಗಳಲ್ಲಿ, ಕ್ರೀಡೆಗಳನ್ನು ರಾಷ್ಟ್ರೀಯ ಅಭಿವೃದ್ಧಿಯ ಪ್ರಮುಖ ಪ್ರವಾಹವಾಗಿ ನೋಡಲಾಗಿದೆ ಎಂದು ಅವರು ಹೇಳಿದರು.

ಖೇಲೋ ಇಂಡಿಯಾದಂತಹ ಉಪಕ್ರಮಗಳು ದೇಶದ ಕ್ರೀಡಾ ಪರಿಸರ ವ್ಯವಸ್ಥೆಗೆ ಹೊಸ ಶಕ್ತಿಯನ್ನು ತುಂಬಿವೆ ಮತ್ತು ದೇಶಾದ್ಯಂತ ಕ್ರೀಡಾ ಮೂಲ ಸೌಕರ್ಯವನ್ನು ಬಲಪಡಿಸಲಾಗುತ್ತಿದೆ ಎಂದು ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹೇಳಿದರು.

# ಕಂದಾಯ ಗ್ರಾಮಗಳ ಪ್ರಸ್ತಾವನೆಗೆ ಗಡುವು

## ವರ್ಷಾಂತ್ಯದೊಳಗೆ ನಿವೃತ್ತ ಸೈನಿಕರಿಗೆ ಸರ್ಕಾರಿ ನಿವೇಶನ: ಕೃಷ್ಣ ಬೈರೇಗೌಡ ಭರವಸೆ

• ಪ್ರಜೋದಯ ವರದಿ

**ಬೆಂಗಳೂರು:** ನೂತನ ಕಂದಾಯ ಗ್ರಾಮ-ಉಪಗ್ರಾಮ ರಚನೆಗೆ ಪ್ರಸ್ತಾವನೆ ನೀಡಲು ಅಧಿಕಾರಿಗಳಿಗೆ ಮಾರ್ಚ್ 16ರ ವರೆಗೆ ಗಡುವು ನಿಗದಿಪಡಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು.

ಸೋಮವಾರ ವಿಧಾನಸಭೆ ಪ್ರಶ್ನೋತ್ತರ ಕಲಾಪದ ವೇಳೆ ಉತ್ತರ ನೀಡಿದ ಅವರು, ಕೆಲವು ಅಧಿಕಾರಿಗಳು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ದಾಖಲೆ ರಹಿತ ವಸತಿ ಪ್ರದೇಶಗಳನ್ನು ಗುರುತಿಸಿ ಲಕ್ಷಾಂತರ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ಸಹಕರಿಸಿದ್ದಾರೆ. ಕೆಲವು ಅಧಿಕಾರಿಗಳ ಅಸಡ್ಡೆಯಿಂದ ಅರ್ಹತೆ ಇದ್ದರೂ ಹಲವು ವಸತಿ ಪ್ರದೇಶಗಳಿಗೆ ದಾಖಲೆ ನೀಡಲು ಸಾಧ್ಯವಾಗಿಲ್ಲ. ಹೀಗಾಗಿ ಮಾರ್ಚ್16ರೊಳಗೆ ಎಲ್ಲಾ ಅರ್ಹ ಕಂದಾಯ ಗ್ರಾಮ-ಉಪಗ್ರಾಮ ರಚನೆಗೆ ಪ್ರಸ್ತಾವನೆ ನೀಡುವಂತೆ ಅಧಿಕಾರಿಗಳಿಗೆ ಗಡುವು ನೀಡಲಾಗಿದೆಂದು ವಿವರಿಸಿದರು.

ಪ್ರಸ್ತುತ ಜನಗಣತಿ ಪ್ರಗತಿಯಲ್ಲಿದೆ. ಜನಗಣತಿ ಸಂದರ್ಭದಲ್ಲಿ ಕಂದಾಯ ಗ್ರಾಮ ಘೋಷಿಸುವಂತಿಲ್ಲ. ಹೀಗಾಗಿ ಜನಗಣತಿ ಮುಗಿದ ಕೂಡಲೇ ಆ ಭಾಗದ ಅರ್ಹ ಫಲಾನುಭವಿಗಳಿಗೆ ದಾಖಲೆ ಮಾಡಿಕೊಡುತ್ತೇವೆ. ಪ್ರಸ್ತುತ ಎಲ್ಲವೂ ಆನ್‌ಲೈನ್ ಡಿಜಿಟಲೀಕರಣವಾಗಿದೆ. ನಾಳೆ ಯಾರು ಇರಲಿ ಇಲ್ಲದಿರಲಿ ದಾಖಲೆ ಆಗುತ್ತದೆಂದು ಸದನಕ್ಕೆ ಮಾಹಿತಿ ನೀಡಿದರು.

ಸರ್ಕಾರ ಕಳೆದ ಎರಡೂವರೆ ವರ್ಷದಲ್ಲಿ 2.17 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಿದೆ. ಇನ್ನೂ 1.50 ರಿಂದ 2 ಲಕ್ಷ ಮನೆಗಳಿಗೆ ಹಕ್ಕುಪತ್ರ ನೀಡಲು ಪ್ರಸ್ತಾವನೆ ಬಂದಿವೆ. ಈ ಜವಾಬ್ದಾರಿಯನ್ನು ಸಂಪೂರ್ಣ ಅಧಿಕಾರಿಗಳಿಗೆ ವಹಿಸದೆ, ಜನ ಪ್ರತಿನಿಧಿಗಳೂ ಈ ಬಗ್ಗೆ ಆಸಕ್ತಿ ತೆಗೆದುಕೊಂಡರೆ ಮತ್ತಷ್ಟು ಜನರಿಗೆ ಅನುಕೂಲವಾಗಲಿದೆ ಎಂದೂ ಅವರು ಅಭಿಪ್ರಾಯಪಟ್ಟರು.



### ಬೆರಳ ತುದಿಯಲ್ಲಿ ಮಾಹಿತಿ

ಪ್ರಸ್ತುತ ಯಾವ ತಾಲ್ಲೂಕು, ಯಾವ ಜಿಲ್ಲೆಯಲ್ಲಿ ಎಷ್ಟು ಜನ ಸೈನಿಕರು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆಂಬ ದಾಖಲೆ ಬೆರಳ ತುದಿಯಲ್ಲಿದೆ. ಈ ಎಲ್ಲಾ ಅರ್ಜಿಗಳನ್ನೂ ಆನ್‌ಲೈನ್ ಮೂಲಕ ಡಿಜಿಟಲೀಕರಣ ಮಾಡಲಾಗಿದೆ. ಮೊದಲು ಈ ವ್ಯವಸ್ಥೆ ಇರಲಿಲ್ಲ. ನಿಖರ ದಾಖಲೆಗಳೂ ಲಭ್ಯ ಇರಲಿಲ್ಲ. ಯಾವ ತಾಲ್ಲೂಕಿನಲ್ಲಿ ಎಷ್ಟು ಅರ್ಜಿ ಇದೆ ಎಂದು ತಹಶೀಲ್ದಾರ್‌ಗೆ ಪತ್ರ ಬರೆಯ ಬೇಕಿತ್ತು. ಪ್ರಸ್ತುತ ಎಲ್ಲವನ್ನೂ ಡಿಜಿಟಲೀಕರಣಗೊಳಿಸಲಾಗಿದೆ. ನಮ್ಮ ಬೆರಳ ತುದಿಯಲ್ಲಿ ಎಲ್ಲಾ ಮಾಹಿತಿ ಲಭ್ಯವಿದೆಂದು ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು.

**ವರ್ಷಾಂತ್ಯದೊಳಗೆ ನಿವೇಶನ ಮಂಜೂರು**

ಮಾಜಿ ಸೈನಿಕರ ಕೋಟಾದ ಅಡಿಯಲ್ಲಿ ನಿವೇಶನ ಕೋರಿ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಅರ್ಜಿ ಬಾಕಿ ಇವೆ ಎಂದು ಪರಿಗಣಿಸಿ ಈ ವರ್ಷಾಂತ್ಯದೊಳಗೆ ಬಡಾವಣೆ ನಿರ್ಮಿಸಿ ನಿವೇಶನ ಮಂಜೂರು ಮಾಡಲಾಗುವುದೆಂದು ಸಚಿವರು ಭರವಸೆ ನೀಡಿದರು.

ರಾಜ್ಯಾದ್ಯಂತ ಎಲ್ಲಾ ಮಾಜಿ ಸೈನಿಕರಿಗೂ ಅರ್ಹತೆ ಆಧಾರದಲ್ಲಿ ನಿವೇಶನ ನೀಡಬೇಕು ಎಂದು ಸರ್ಕಾರವೂ ಘೋಷಿಸಿದೆ. ಈ ಯೋಜನೆಯ ಅನುಷ್ಠಾನಕ್ಕೆ ಜಮೀನಿನ ಅಗತ್ಯವಿದೆ. ವಾಸಯೋಗ್ಯ ಸ್ಥಳವನ್ನು ಗುರುತಿಸಿ ಬಡಾವಣೆ ನಿರ್ಮಿಸಲು ಅಧಿಕಾರಿಗಳಿಗೆ ಸೂಚಿಸಲಾಗುವುದು. ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ 14 ಎಕರೆ ಜಾಗವನ್ನು ಗುರುತಿಸಲಾಗಿದೆ. ಅದರಲ್ಲಿ ಕನಿಷ್ಠ 350 ನಿವೇಶನಗಳನ್ನು ನಿರ್ಮಿಸಬಹುದೆಂದು ಸದನಕ್ಕೆ ಮಾಹಿತಿ ನೀಡಿದರು.

**ಸೇಂದಿವನ ಮಂಜೂರು ಅಸಾಧ್ಯ**

ಅಕ್ರಮ-ಸಕ್ರಮ ಬಗರ್ ಹುಕುಂ ಯೋಜನೆಯ ಅಡಿಯಲ್ಲಿ ಅರ್ಹ ರೈತರಿಗೆ ಜಮೀನು ಮಂಜೂರು ಮಾಡಬೇಕೆಂಬ ಸರ್ಕಾರದ ಉದ್ದೇಶದಲ್ಲಿ ಯಾವುದೇ ಬದಲಾವಣೆ ಇಲ್ಲ. ಹಾಗೆಂದು ಕಾನೂನು-ನಿಯಮಗಳನ್ನೂ ಮೀರಲು ಸಾಧ್ಯವಿಲ್ಲ ಎಂದು ಕೃಷ್ಣ ಬೈರೇಗೌಡ ಅವರು ಸ್ಪಷ್ಟಪಡಿಸಿದರು.

ವಿಧಾಸಭೆಯಲ್ಲಿ ಸೇಂದಿವನವನ್ನು ಬಗರ್ ಹುಕುಂ ಯೋಜನೆಯ ಅಡಿಯಲ್ಲಿ ರೈತರಿಗೆ ಭೂ ಮಂಜೂರು ಮಾಡುವ ಸಂಬಂಧ ಪ್ರಶ್ನೋತ್ತರ ಕಲಾಪದ ಸಮಯದಲ್ಲಿ ಉತ್ತರ ನೀಡಿದ ಅವರು, ಹಿಂದೆ ಕರ್ನಾಟಕದಲ್ಲಿ ಹೆಂಡ (ಸೇಂದಿ) ಇಳಿಸುವ ಕುಲಕಸುಬು ಇತ್ತು. ಹೀಗಾಗಿ ಇದೇ ಕಸುಬವನ್ನು ನಂಬಿಕೊಂಡಿದ್ದವರಿಗಾಗಿ ಕೆಲವು ಪ್ರದೇಶಗಳನ್ನು ಈಚಲುವನ ಅಥವಾ ಸೇಂದಿವನ ಎಂದು ಕಾಯ್ದಿರಿಸಲಾಗಿತ್ತು. ಕಾಲಾನಂತರ ಈ ವೃತ್ತಿ ಯನ್ನು ನಿಷೇಧಿಸಿದ ಮೇಲೆ ಆ ಜಮೀನಿನಲ್ಲಿ ಕೆಲವರು ಕೃಷಿ ಮಾಡಿಕೊಂಡಿದ್ದರೆ, ಕೆಲವು ಪ್ರದೇಶ ಗಳನ್ನು ಸರ್ಕಾರವೇ ಜನ ಕಲ್ಯಾಣ ಕಾರ್ಯ ಕ್ರಮಗಳಿಗೆ ನೀಡಿದೆ. ಅದೇ ಪ್ರದೇಶಗಳನ್ನು ಪ್ರಸ್ತುತ ಬಗರ್ ಹುಕುಂ ಯೋಜನೆ ಅಡಿಯಲ್ಲಿ ಮಂಜೂರು ಮಾಡಲು 2003ರ ಸರ್ಕಾರಿ ಆದೇಶದ ಕಾರಣಕ್ಕೆ ಕೆಲವು ಕಾನೂನು ತೊಡಕುಗಳಿವೆ ಎಂದು ವಿವರಿಸಿದರು.

# ಯುವತಿಯ ಗೃಹ ಬಂಧನ: ಆರೋಪಿಗಳ ಬಂಧಕ್ಕೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಯುವತಿಯನ್ನು ಆಕೆಯ ಮಲತಾಯಿ ಹಾಗು ಮಗ ಗೃಹ ಬಂಧನದಲ್ಲಿಟ್ಟು, ಚಿತ್ರಹಿಂಸೆ ನೀಡಿ ಮಾನಸಿಕ ಖಿನ್ನತೆಗೆ ಒಳಗಾಗುವಂತೆ ಮಾಡಿದ್ದಾರೆ. ದೌರ್ಜನ್ಯ ಎಸಗಿರುವ ಆರೋಪಿಗಳನ್ನು ಬಂಧಿಸಬೇಕೆಂದು ಯುವತಿಯ ಸಂಬಂಧಿ ಟಿ.ಶಾರದಾ ಅವರು ಮನವಿ ಮಾಡಿದರು.



ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಕಟ್ಟಾಯ ಹೋಬಳಿ ಬಾಚಿಹಳ್ಳಿ ಗ್ರಾಮದ ಜ್ಯೋತಿ ಎಂಬ ಯುವತಿ, ವಸಂತಕುಮಾರ ಎಂಬುವವರ ಮೊದಲ ಪತ್ನಿಯ ಮಗಳಾಗಿದ್ದು, ಹುಟ್ಟಿದಾಗಲೇ ಅಮ್ಮನನ್ನು ಕಳೆದುಕೊಂಡಿದ್ದಾಳೆ. ಆರಂಭದಿಂದಲೂ ಚಿಕ್ಕಮ್ಮ (ಮಲತಾಯಿ) ಪದ್ಮ ಸರಿಯಾಗಿ ಊಟ-ತಿಂಡಿ ಕೊಡದೆ, ಯಾವುದೇ ಸೌಕರ್ಯ ನೀಡದೆ ಮಾನಸಿಕ ಹಿಂಸೆ ನೀಡಿದ್ದರಿಂದ ಯುವತಿ ಮಾನಸಿಕ ಖಿನ್ನತೆ ಒಳಗಾಗಿದ್ದಾಳೆಂದು ಹೇಳಿದರು.

ತಂದೆ ವಸಂತ್‌ಕುಮಾರ್ ಹೆಸರಿನಲ್ಲಿದ್ದ ಆಸ್ತಿಯನ್ನು ಪದ್ಮ ಹಾಗು ಆಕೆಯ ಮಗ ಮಂಜೇಶ್ ಎಂಬುವವರು ತಮ್ಮ ಹೆಸರಿಗೆ ಮಾಡಿಸಿಕೊಂಡು ಮೋಸ ಮಾಡಿದ್ದಾರೆ. ಯುವತಿಗೆ ತಿಳಿಯದ ರೀತಿ ಬೇರೆ ಬೇರೆ ಮಾತ್ರೆಗಳನ್ನು ನೀಡಿ, ರೂಮಿನಲ್ಲಿ ಕೂಡಿ ಹಾಕಿದ್ದರಿಂದ ಈಗ ಅನಾರೋಗ್ಯ ಭೀತಿ ಎದುರಾಗಿದೆ. ಯುವತಿಯನ್ನು ಗೃಹ ಬಂಧನದಲ್ಲಿ ಇಟ್ಟಿರುವ ಬಗ್ಗೆ ಈ ಸಂಬಂಧ ಗೊರೂರು ಪೊಲೀಸ್ ಠಾಣೆಗೆ ದೂರುನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ದೂರಿದರು.

ಆರಂಭದಲ್ಲೇ ಪೊಲೀಸರು ಕ್ರಮ ಕೈಗೊಂಡಿದ್ದರೆ ಜ್ಯೋತಿಗೆ ಇಂತಹ ಸ್ಥಿತಿ ಬರುತ್ತಿರಲಿಲ್ಲ, ಹುಡುಗಿ ಸ್ನಾನ ಮಾಡಿ ಹಲವು ದಿನಗಳೇ ಕಳೆದಿವೆ. ಹೀಗಾಗಿ ಚರ್ಮದ ಬಣ್ಣವೇ ಬದಲಾಗಿದೆ. ಮೈಯೆಲ್ಲಾ ಕೊಳಲಾಗಿ, ವಿರೂಪವಾಗಿದೆ. ಫೆ.7 ರಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಅಕ್ಕ ಪಡೆ ತಂಡದಿಂದ ಜ್ಯೋತಿಯನ್ನು ಗೃಹ ಬಂಧನದಿಂದ ಬಿಡುಗಡೆಗೊಳಿಸಿ ಹಿಮ್ಸ್ ಆಸ್ಪತ್ರೆಗೆ ಕರೆತಂದು ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಜ್ಯೋತಿಗೆ ಸ್ನಾನ ಮಾಡಿಸುವಾಗ ಆಕೆಯ ಎದೆಯ ಭಾಗಕ್ಕೆ ಕಚ್ಚಿರುವ ಗುರುತು ಕಂಡು ಬಂದಿವೆ. ಮೊದಲೇ ನೊಂದಿರುವ ಯುವತಿಗೆ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಶಂಕೆ ಇದೆ ಎಂದು ಅನುಮಾನ ವ್ಯಕ್ತಪಡಿಸಿದರು.

ಹೀಗಿದ್ದರೂ ಯುವತಿಯನ್ನು ಸೂಕ್ತ ಪರೀಕ್ಷೆಗೆ ಒಳ ಪಡಿಸಲು ಪೊಲೀಸರು ವಿಳಂಬ ಮಾಡುತ್ತಿದ್ದಾರೆ. ಫೆ.17 ರಂದು ಸ್ವತಃ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ಜ್ಯೋತಿಯ ಫೋಟೋ ತೋರಿಸಿದ ನಂತರ ತಕ್ಷಣ ಎಫ್‌ಐಆರ್ ಮಾಡಲು ಸೂಚಿಸಿದ ನಂತರ ಫೆ.18 ರಂದು ಎಫ್‌ಐಆರ್ ದಾಖಲಾಗಿದೆ. ಆದರೂ ಹುಡುಗಿಗೆ ಹಿಂಸೆ ನೀಡಿರುವ ಆರೋಪಿಗಳನ್ನು ಈವರೆಗೂ ಬಂಧಿಸಿಲ್ಲ. ಈ ಬೆಳವಣಿಗೆ ನೋಡಿದರೆ ಪ್ರಕರಣ ಮುಚ್ಚಿಹಾಕುವ ಹುನ್ನಾರ ನಡೆದಿರುವ ಅನುಮಾನ ಮೂಡುತ್ತಿದೆ ಎಂದು ದೂರಿದರು.

ಯುವತಿ ಫೋಟೋ ನೋಡಿದ ಅನೇಕ ವೈದ್ಯರು ಲೈಂಗಿಕ ದೌರ್ಜನ್ಯ ನಡೆದಿರುವ ಬಗ್ಗೆ ಅನುಮಾನ ಹೊರ ಹಾಕಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು. ಇನ್ನಾದರೂ ಅಧಿಕಾರಿಗಳು, ಸಚಿವರು, ಸಂಸದರು, ಮಹಿಳಾ ಆಯೋಗದ ಅಧ್ಯಕ್ಷರು ಈ ಬಗ್ಗೆ ಪರಿಶೀಲಿಸಿ ಅನಾಥ ಜ್ಯೋತಿಗೆ ಆಗಿರುವ ಅನ್ಯಾಯಕ್ಕೆ ನ್ಯಾಯ ಕೊಡಿಸಬೇಕು. ಈ ಸ್ಥಿತಿಗೆ ಕಾರಣವಾಗಿರುವ ಪದ್ಮ ಮತ್ತು ಮಂಜೇಶ್‌ನನ್ನು ಬಂಧಿಸಬೇಕೆಂದು ಒತ್ತಾಯಿಸಿದರು.

## ರಸ್ತೆ ದುರಸ್ತಿ: ಶಾಸಕರ ಸ್ಪಂದನೆಗೆ ಮೆಚ್ಚುಗೆ



• ಪ್ರಜೋದಯ ವರದಿ

**ಅರೇಹಳ್ಳಿ:** ಪಟ್ಟಣದ ಹೊರವಲಯದ ಲಿಂಗಾಪುರ ಗ್ರಾಮದ ಸ್ಮಶಾನದಿಂದ ಅರ್ಧ ಕಿಲೋ ಮೀಟರ್ ಉದ್ದದ ರಸ್ತೆಯಲ್ಲಿ ದೊಡ್ಡ ಗಾತ್ರದ ಗುಂಡಿಗಳು ಬಿದ್ದು ಸಂಚಾರಕ್ಕೆ ಅಡಚಣೆ ಉಂಟಾಗುತ್ತಿತ್ತು. ಅದಕ್ಕೆ ಸ್ಪಂದಿಸಿದ ಶಾಸಕ ಹೆಚ್.ಕೆ.ಸುರೇಶ್ ಅವರು ತಕ್ಷಣ ಕ್ರಮ ಕೈಗೊಂಡು ಇದೀಗ ಗುಂಡಿ ಮುಚ್ಚಿಸಿರುವುದಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬೇಲೂರಿನಿಂದ ಸಕಲೇಶಪುರಕ್ಕೆ ಸಂಪರ್ಕಿಸುವ ಪ್ರಮುಖ ರಸ್ತೆಯ ಲಿಂಗಾಪುರ ಗ್ರಾಮದ ಸಮೀಪ ರಸ್ತೆಯ ಉದ್ದಗಲಕ್ಕೂ ದೊಡ್ಡ ಮಟ್ಟದ ಗುಂಡಿಗಳು ಬಿದ್ದಿದ್ದರಿಂದ ನಿತ್ಯ ಸಂಚರಿಸುವ ನೂರಾರು ವಿದ್ಯಾರ್ಥಿಗಳು ಹಾಗು ವಾಹನ ಸವಾರರು ಸಂಕಷ್ಟ ಅನುಭವಿಸುತ್ತಿದ್ದರು. ಈ ಹಿನ್ನಲೆ ಸ್ಥಳೀಯ ಮುಖಂಡರು ಮಾಧ್ಯಮಗಳ ಮೂಲಕ ಹಲವು ಬಾರಿ ಶಾಸಕರ ಗಮನಕ್ಕೆ ವಿಷಯವನ್ನು ತಂದಿದ್ದರು.

ಮೊದಲ ಹಂತದಲ್ಲಿ ದುರಸ್ತಿ ಕಾಮಗಾರಿ ಕೈಗೊಂಡಿದ್ದರೂ ಅದು ಕಳಪೆ ಎಂದು ಸ್ಥಳೀಯರು ಮತ್ತೆ ಧ್ವನಿ ಎತ್ತಿದ್ದರು. ಬಳಿಕ ಸ್ಪಂದಿಸಿದ ಶಾಸಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಿದ ಹಿನ್ನಲೆ ಗುಣಮಟ್ಟದಲ್ಲಿ ದುರಸ್ತಿ ಕಾಮಗಾರಿ ಪೂರ್ಣಗೊಂಡಿದೆ.ಆದರಿಂದ ವಾಹನ ಸವಾರರಿಗೆ ತಾತ್ಕಾಲಿಕ ಪರಿಹಾರ ದೊರೆತಂತಾಗಿದೆ. ಶಾಸಕರ ಸ್ಪಂದನೆಗೆ ಸ್ಥಳೀಯ ಮುಖಂಡರು, ವಾಹನ ಸವಾರರು ಹಾಗು ಶಾಲಾ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.

# ರೈತರಿಗೆ ಆಧುನಿಕ ಯಂತ್ರೋಪಕರಣಗಳ ನೆರವು

## ಶುಗರ್ ಕೇನ್ ಹಾರ್ವೆಸ್ಟರ್, ಇಂಟರ್ ರೋಟಾವೇಟರ್‌ಗೆ ರೇವಣ್ಣ ಚಾಲನೆ

• ಪ್ರಜೋದಯ ವರದಿ

**ಹಾಸನ:** ರೈತರಿಗೆ ಕೃಷಿ ಕಾರ್ಯಗಳನ್ನು ಸುಲಭಗೊಳಿಸಲು ಹಾಗು ಕಾರ್ಮಿಕರ ಕೊರತೆ ಯನ್ನು ನಿವಾರಿಸಲು ಸರ್ಕಾರ ಜಾರಿಗೆ ತಂದಿರುವ ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಶುಗರ್ ಕೇನ್ ಹಾರ್ವೆಸ್ಟರ್ ಮತ್ತು ಇಂಟರ್ ರೋಟಾವೇಟರ್ ಯಂತ್ರೋಪಕರಣಗಳನ್ನು ಸಹಾಯಧನದಡಿ ರೈತರಿಗೆ ಒದಗಿಸಲಾಗಿದೆ.

ನಗರದ ಸಂತೇಪೇಟೆ ವೃತ್ತದ ಸಮೀಪವಿರುವ ಕೃಷಿ ಇಲಾಖೆ ಆವರಣದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಯಂತ್ರೋಪಕರಣಗಳಿಗೆ ಚಾಲನೆ ನೀಡಿ ಮಾತನಾಡಿ, 2025-26ನೇ ಸಾಲಿನ ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆ ಯಡಿ ಕೃಷಿ ಇಲಾಖೆಯ ಮಾರ್ಗಸೂಚಿಯಂತೆ ವೈಯಕ್ತಿಕ ಸಾಮಾನ್ಯ ಘಟಕ ವರ್ಗದಲ್ಲಿ ರೈತರಿಗೆ ಆಧುನಿಕ ಕೃಷಿ ಯಂತ್ರೋಪಕರಣಗಳನ್ನು ಒದಗಿಸಲಾಗುತ್ತಿದೆ ಎಂದು ತಿಳಿಸಿದರು.



ತಮ್ಮ ವಿಧಾನಸಭಾ ಕ್ಷೇತ್ರದ ಬೋಗರಹಳ್ಳಿ ಕೊಪ್ಪಲು ಹಾಗು ಸುತ್ತಮುತ್ತಲಿನ ಪ್ರದೇಶದ ರೈತರಿಗೆ ಈ ಯೋಜನೆಯಿಂದ ಹೆಚ್ಚಿನ ಅನುಕೂಲವಾಗಲಿದೆ. ಈ ಯಂತ್ರೋಪಕರಣಗಳಿಗಾಗಿ ಸರ್ಕಾರದಿಂದ ಸುಮಾರು 37 ಲಕ್ಷ ರೂ. ಗಳ ಸಬ್ಸಿಡಿ ದೊರೆಯುತ್ತಿದ್ದು, ಶುಗರ್ ಕೇನ್ ಹಾರ್ವೆಸ್ಟರ್ ಯಂತ್ರವು ಒಂದು ದಿನಕ್ಕೆ ಸುಮಾರು 60 ಟನ್ ಕಬ್ಬನ್ನು ಕತ್ತರಿಸಿ ನೇರವಾಗಿ ಲಾರಿಗೆ ಲೋಡ್ ಮಾಡುವ ಸಾಮರ್ಥ್ಯ ಹೊಂದಿದೆ. ಅದರಿಂದ ರೈತರಿಗೆ ಸಮಯ ಮತ್ತು ಕಾರ್ಮಿಕ ವೆಚ್ಚ ಎರಡನ್ನೂ ಕಡಿಮೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಕೊರತೆ ಹೆಚ್ಚಾಗುತ್ತಿರುವ ಹಿನ್ನಲೆ ಇಂತಹ ಆಧುನಿಕ ಯಂತ್ರೋಪಕರಣಗಳ ಬಳಕೆ ಬಹಳ ಅಗತ್ಯವಾಗಿದೆ. ಕಬ್ಬು ಬೆಳೆಗಾರರಿಗೆ ಈ ಯಂತ್ರೋಪಕರ ಣಗಳು ಬಹಳ ಉಪಯುಕ್ತವಾಗ ಲಿದ್ದು, ಕಬ್ಬು ಕಟಾವು ಕಾರ್ಯವನ್ನು ವೇಗ ವಾಗಿ ಹಾಗೂ ಸುಲಭವಾಗಿ ನೆರವೇರಿಸಲು ಸಹಾಯ ಮಾಡು ತ್ತದೆ. ವಿಶೇಷವಾಗಿ ಸಕ್ಕರೆ ಕಾರ್ಖಾನೆ ಗಳಿಗೆ ಕಬ್ಬು ಪೂರೈಕೆ ಮಾಡುವ ರೈತರಿಗೆ ಇದು ಹೆಚ್ಚಿನ ನೆರವಾಗಲಿ ದೆಂದು ಹೇಳಿದರು.

### ಖಾಲಿ ಹುದ್ದೆ ನೇಮಕಕ್ಕೆ ಒತ್ತಾಯ

ಇದೇ ವೇಳೆ ಕೃಷಿ ಹಾಗೂ ತೋಟಗಾರಿಕೆ ಇಲಾಖೆಯಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇರುವುದರಿಂದ ರೈತರಿಗೆ ಅಗತ್ಯ ಸೇವೆಗಳು ಸಮಯಕ್ಕೆ ಸರಿಯಾಗಿ ದೊರೆಯುತ್ತಿಲ್ಲ. ಆದ್ದರಿಂದ ಈ ಎರಡು ಇಲಾಖೆಗಳಲ್ಲೂ ಶೇಕಡಾ ನೂರಕ್ಕೆ ನೂರು ನೇಮಕಾತಿ ನಡೆಸುವಂತೆ ಸರ್ಕಾರವನ್ನು ಒತ್ತಾಯಿಸುವುದಾಗಿ ರೇವಣ್ಣ ಅವರು ಹೇಳಿದರು.

ಕೃಷಿ ಇಲಾಖೆಯ ಅಧಿಕಾರಿಗಳು ರೈತರ ಅನುಕೂಲಕ್ಕಾಗಿ ಈ ಯಂತ್ರೋಪಕರಣಗಳನ್ನು ಒದಗಿಸಿರುವುದು ಸಂತೋಷದ ಸಂಗತಿ. ಮುಂದಿನ ದಿನಗಳಲ್ಲೂ ರೈತರಿಗೆ ಅಗತ್ಯವಾದ ಆಧುನಿಕ ಕೃಷಿ ಉಪಕರಣಗಳನ್ನು ಸಹಾಯಧನದಡಿ ನೀಡುವ ಯೋಜನೆಗಳನ್ನು ಸರ್ಕಾರ ಇನ್ನಷ್ಟು ವಿಸ್ತರಿಸಬೇಕೆಂದು ತಿಳಿಸಿದರು.

ರೈತರು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಕೃಷಿ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳ ಬೇಕು. ಸರ್ಕಾರ ನೀಡುತ್ತಿರುವ ಸಬ್ಸಿಡಿ ಹಾಗೂ ಯೋಜನೆಗಳ ಸದುಪಯೋಗ ಪಡೆದುಕೊಂಡು ಕೃಷಿಯನ್ನು ಲಾಭದಾಯಕವಾಗಿಸಬೇಕೆಂದು ಅವರು ಕರೆ ನೀಡಿದರು.

## ಬಡಾವಣೆಗೆ ಕೃಷಿ ಭೂಮಿ ಸ್ವಾಧೀನ ಪ್ರಸ್ತಾವನೆಗೆ ವಿರೋಧ

» ಮೊದಲನೇ ಪುಟದಿಂದ

ಖರ್ಚು ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಜಮೀನನ್ನು ಸ್ವಾಧೀನ ಪಡಿಸಿ ಕೊಂಡರೆ ರೈತರು ಬರಿಗೈ ಆಗಿ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಹಾಸನದ ಸುತ್ತಮುತ್ತ ಈಗಾಗಲೇ ನೂರಾರು ಖಾಸಗಿ ವಸತಿ ಬಡಾವಣೆ ನಿರ್ಮಾಣವಾಗಿದ್ದು, 12ಸಾವಿರಕ್ಕೂ ಹೆಚ್ಚು ಖಾಲಿ ನಿವೇಶನ ಮಾರಾಟವಾಗದೇ ಉಳಿದಿವೆ. ಇದೇ ವೇಳೆ ಹುಡಾದಿಂದ ನಿರ್ಮಿಸಿರುವ ಎಸ್.ಎಂ.ಕೃಷ್ಣಾ ನಗರ ವಸತಿ ಬಡಾವಣೆಯಲ್ಲಿ ಶೇ.30 ರಷ್ಟು ಮನೆ ಮಾತ್ರ ನಿರ್ಮಾಣಗೊಂಡಿದ್ದು, ಉಳಿದ ಶೇ.70 ರಷ್ಟು ನಿವೇಶನ ಖಾಲಿಯಾಗಿವೆ. ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಕೆಂಚಟ್ಟಹಳ್ಳಿ ವಸತಿ ಬಡಾವಣೆಯಲ್ಲಿ ಸುಮಾರು 14 ಸಾವಿರ ನಿವೇಶನ ಹಂಚಿಕೆ ಹಂತದಲ್ಲಿವೆ. ಇದಲ್ಲದೆ, 20 ವರ್ಷಗಳ ಹಿಂದೆ ಕೆಹೆಚ್‌ಬಿ ನಿರ್ಮಿಸಿದ ಸತ್ಯಮಂಗಲ ಹಾಗು ಚನ್ನಪಟ್ಟಣ ವಸತಿ ಬಡಾವಣೆಗಳಲ್ಲಿಯೂ ಅನೇಕ ಖಾಲಿ ನಿವೇಶನ ಉಳಿದಿವೆ. ಈ ಹಿನ್ನಲೆ ನಿವೇಶನಗಳ ನಿಜವಾದ ಬೇಡಿಕೆ ಬಗ್ಗೆ ಸಮಗ್ರ ಸಮೀಕ್ಷೆ ನಡೆಸದೆ ರೈತರ ಫಲವತ್ತಾದ ಕೃಷಿ ಜಮೀನನ್ನು ವಸತಿ ಬಡಾವಣೆಗಾಗಿ ಪರಿವರ್ತಿಸುವುದು ಸರಿಯಲ್ಲ. ಇದರಿಂದ ಬಂಡವಾಳಶಾಹಿಗಳಿಗೆ ಮಾತ್ರ ಲಾಭವಾಗುವ ಪರಿಸ್ಥಿತಿ ಉಂಟಾಗಬಹುದೆಂದು ಹೇಳಿದರು.

ಹೂವಿನಹಳ್ಳಿ ಮತ್ತು ಹೂವಿನಹಳ್ಳಿ ಕಾವಲು ಗ್ರಾಮದ ಬಡ ರೈತರ ಜೀವನಾಧಾರವಾಗಿರುವ ಕೃಷಿ ಜಮೀನನ್ನು ವಸತಿ ಬಡಾವಣೆಗಾಗಿ ಸ್ವಾಧೀನ ಪಡಿಸಿಕೊಳ್ಳುವ ಯೋಜನೆಯನ್ನು ಸರ್ಕಾರ ಮರುಪರಿಶೀಲಿಸಬೇಕು. ರೈತರ ಬದುಕಿಗೆ ಆಧಾರವಾದ ಈ ಜಮೀನು ಉಳಿಸಿಕೊಡಬೇಕೆಂದು ಗ್ರಾಮಸ್ಥರು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಗ್ರಾಮಸ್ಥರಾರ ಸದಾಶಿವ, ಹರೀಶ್, ಹೇಮಂತ್, ನಾಗರಾಜು, ರೇವತಿ, ಕೃಷ್ಣಮೂರ್ತಿ, ರವಿಕುಮಾರ್ ಇದ್ದರು.

## ಚೆನ್ನೈನ ಯುಎಸ್ ಕಾನ್ಸಲ್ ಜನರಲ್ ಆಗಿ ಮರಿಯಾನಾ

• ಪ್ರಜೋದಯ ವರದಿ

**ನವದೆಹಲಿ:** ಚೆನ್ನೈನ ಯುಎಸ್ ಕಾನ್ಸಲ್ ಜನರಲ್ ಆಗಿ ಮರಿಯಾನಾ ಎಲ್.ನೈಶುಲರ್ ಅವರು ಸೋಮವಾರ ಅಧಿಕಾರ ಸ್ವೀಕರಿಸಿದ್ದಾರೆ. ಈ ವೇಳೆ ಮಾತನಾಡಿದ ಅವರು, ಭಾರತ ಮತ್ತು ಅಮೇರಿಕ ನಡುವಿನ ದ್ವಿಪಕ್ಷೀಯ ಸಂಬಂಧದ ನಿರ್ಣಾಯಕ ಘಟ್ಟದಲ್ಲಿ ದಕ್ಷಿಣ ಭಾರತದಿಂದ ಅಮೇರಿಕ ಪ್ರತಿನಿಧಿಸುತ್ತಿರುವುದು ನನಗೆ ಸಂದ ಗೌರವವಾಗಿದೆ ಎಂದು ಹೇಳಿದ್ದಾರೆ.

# ಅನುದಾನಕ್ಕೆ ಅನುಗುಣವಾಗಿ ರಸ್ತೆ ದುರಸ್ತಿಗೆ ಒತ್ತು

• ಪ್ರಜೋದಯ ವರದಿ

**ಸಕಲೇಶಪುರ:** ಕ್ಷೇತ್ರದ ಗ್ರಾಮೀಣ ಪ್ರದೇಶಗ ಳಲ್ಲಿನ ಹಲವು ರಸ್ತೆಗಳು ಇನ್ನೂ ದುಸ್ಥಿತಿಯಲ್ಲಿದ್ದು, ಹಂತ ಹಂತವಾಗಿ ಕ್ರಿಯಾ ಯೋಜನೆ ರೂಪಿಸಿ ಅವುಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.



ತಾಲ್ಲೂಕಿನ ಹಲಸುಲಿಗೆ ಹಾಗು ಬಿರಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮಾಂತರ ಪ್ರದೇಶ ಗಳಲ್ಲಿ ಅಭಿವೃದ್ಧಿಯಾಗದೆ ವಾಹನ ಸಂಚಾರಕ್ಕೂ ಅಸೌಕರ್ಯವಾಗಿರುವ ರಸ್ತೆಗಳ ಕುರಿತು ಮಾಹಿತಿ ಸಂಗ್ರಹಿಸಲಾಗಿದೆ. ಅನುದಾನಕ್ಕೆ ಅನುಗುಣವಾಗಿ ಹಂತ ಹಂತವಾಗಿ ಅವುಗಳ ಅಭಿವೃದ್ಧಿಗೆ ಚಾಲನೆ ನೀಡಲಾಗುವುದೆಂದು ಭರವಸೆ ನೀಡಿದರು.

ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರದ ಮೇಲೆ ಒತ್ತಡ ತರಲಾಗಿದ್ದು, ಅದರ ಫಲವಾಗಿ ಈಗ ಕೋಟ್ಯಾಂತರ ರೂ. ವೆಚ್ಚದಲ್ಲಿ ಮತ ಕ್ಷೇತ್ರದ ಬಹುತೇಕ ಗ್ರಾಮಗಳಲ್ಲಿ ರಸ್ತೆ ಹಾಗೂ ಕಾಂಕ್ರಿಟ್ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಇನ್ನಷ್ಟು ಪ್ರಾಮಾಣಿಕವಾಗಿ ಶ್ರಮಿಸಲಾ ಗುವುದೆಂದು ಹೇಳಿದರು.

ಬಿರಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿ ಯಲ್ಲಿ 6 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ, ಬಿರಡಹಳ್ಳಿ ಮುಖ್ಯ ರಸ್ತೆಯಿಂದ ರಾಮಗಿರಿ ಗ್ರಾಮದವರೆಗೆ 20 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ, ಹಾಗೆಯೇ ಬಹುದಶಕಗಳ ಬೇಡಿಕೆ ಯಾಗಿದ್ದ ಹಲಸುಲಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾಗಡಿ ಗ್ರಾಮದ ಪರಿಮಿತಿಯಲ್ಲಿ 15 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಕಾಮಗಾರಿ ವೇಳೆ ಗುತ್ತಿಗೆದಾರರು ರಸ್ತೆ ನಿರ್ಮಾಣದಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಶಾಸಕರು ಸೂಚಿಸಿದರು. ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಸನ್ಯಾಸಿಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ

» ಮೊದಲನೇ ಪುಟದಿಂದ

ಎದುರಿಸುತ್ತಿದ್ದಾರೆ. ಮಹಿಳೆಯರು ಹೆಚ್ಚಿನ ಸಂಕಷ್ಟಕ್ಕೆ ಒಳಗಾಗಿದ್ದು, ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಧಿಕಾರಿ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹಲವು ಸಭೆಗಳಲ್ಲಿ ಹೇಳಿಕೆ ನೀಡುತ್ತಿರುವುದಲ್ಲದೆ, ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಗಳನ್ನು ನಡೆಸಿ ಪಟ್ಟಣ ಹಾಗು ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉಂಟಾಗದಂತೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡುತ್ತಿದ್ದಾರೆ. ಜಾನುವಾರುಗಳಿಗೆ ಆಹಾರ ಮತ್ತು ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಸ್ಥಳೀಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ತಿಳಿಸಲಾಗಿದೆ. ಆದರೆ, ಈ ಸೂಚನೆಗಳು ಕಾಗದದಲ್ಲೇ ಉಳಿದಿದ್ದು, ಸನ್ಯಾಸಿಹಳ್ಳಿ ಗ್ರಾಮದಲ್ಲಿ ಮಾತ್ರ ಸಮಸ್ಯೆ ಬಗೆಹರಿಯದಿರುವುದು ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ. ಗ್ರಾಮ ಪಂಚಾಯಿತಿ ಪಿಡಿಓಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ತೋರಿಸಲಾಗುತ್ತಿದೆ ಎಂಬ ಆರೋಪಿಸಿದ್ದಾರೆ.

ಪಟ್ಟಣದ ಸಮೀಪದಲ್ಲೇ ಯಗಚಿ ಜಲಾಶಯವಿದ್ದರೂ ಸನ್ಯಾಸಿಹಳ್ಳಿ ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆ ಆಗದಿರುವುದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿದಂತಿದೆ. ಯಗಚಿ ಜಲಾಶಯದಿಂದ ಅಕ್ಕಪಕ್ಕದ ಜಿಲ್ಲೆಗಳಿಗೂ ನೀರು ಪೂರೈಸಲಾಗುತ್ತಿರುವ ಸಂದರ್ಭದಲ್ಲಿ ಸ್ಥಳೀಯ ಗ್ರಾಮಗಳಿಗೆ ಮಾತ್ರ ನೀರು ಸಿಗದಿರುವುದು ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯನ್ನು ತೋರಿಸುತ್ತದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಈ ಕುರಿತು ಸ್ಥಳೀಯ ನಿವಾಸಿ ಶ್ರೀನಿವಾಸ್ ಮಾತನಾಡಿ, ಚುನಾವಣೆಯ ಸಂದರ್ಭದಲ್ಲಿ ಜನಪ್ರತಿನಿಧಿಗಳು ಹಲವು ಆಶ್ವಾಸನೆಗಳನ್ನು ನೀಡುತ್ತಾರೆ. ಆದರೆ, ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದ ಬಳಿಕ ಜನರ ಮೂಲಭೂತ ಸಮಸ್ಯೆಗಳತ್ತ ಗಮನ ಹರಿಸುವುದಿಲ್ಲ. ಜನರ ಕಷ್ಟಗಳಿಗೆ ಸ್ಪಂದಿಸಬೇಕಾದ ಜನಪ್ರತಿನಿಧಿಗಳು ಕನಿಷ್ಠ ಮೂಲಭೂತ ಸೌಲಭ್ಯವಾದ ಕುಡಿಯುವ ನೀರನ್ನು ಒದಗಿಸಲು ವಿಫಲವಾಗಿರುವುದು ದುರಾದೃಷ್ಟಕರ ಸಂಗತಿ ಎಂದು ಹೇಳಿದರು.

ಗೌರಮ್ಮ, ಕಮಲಮ್ಮ, ಚಿಕ್ಕಮ್ಮ, ಸೋಮಶೇಖರ್, ಧರ್ಮಣ್ಣ ಗ್ರಾಮಸ್ಥರಿದ್ದರು.

## ಮಹಿಳೆಯರಿಗೆ ಆರೋಗ್ಯ ತಪಾಸಣಾ ಶಿಬಿರ



• ಪ್ರಜೋದಯ ವರದಿ

**ಹಾಸನ:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಮಹಾರಾಜ ಪಾರ್ಕ್‌ನಲ್ಲಿ ರಾಷ್ಟ್ರ ಸೇವಿಕಾ ಸಮಿತಿ, ರಾಜೀವ್ ಆಯುರ್ವೇದ ಮಹಾವಿದ್ಯಾಲಯ ಅವರ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಯಿತು.

ರಾಷ್ಟ್ರ ಸೇವಿಕಾ ಸಮಿತಿಯ ಜಿಲ್ಲಾ ಮುಖಂಡರಾದ ಮಮತಾ, ಭಾಗ್ಯ, ಸುವರ್ಣ, ರಜಿನಿ, ಹೇಮ ಹಾಗೂ ಕಲಾ ಅವರ ನೇತೃತ್ವದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಯಿತು. ಶಿಬಿರದಲ್ಲಿ ಮಹಿಳೆಯರು ಹಾಗೂ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಾಗಿದ್ದು, ವೈದ್ಯರು ತಪಾಸಣೆ, ಆರೋಗ್ಯದ ಬಗ್ಗೆ ಅಗತ್ಯ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ವಿಶೇಷವಾಗಿ ಮಹಿಳೆಯರ ಆರೋಗ್ಯ ಕಾಳಜಿ, ಪೌಷ್ಟಿಕ ಆಹಾರ, ಜೀವನ ಶೈಲಿ ಹಾಗೂ ವಿವಿಧ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘಟನೆ ಮುಖಂಡರು ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸುವುದು ಅಗತ್ಯವೆಂದು ತಿಳಿಸಿದರು. ಇಂತಹ ಶಿಬಿರಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಜನರಿಗೆ ಬಹಳ ಉಪಯುಕ್ತವಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ರಾಷ್ಟ್ರ ಸೇವಿಕಾ ಸಮಿತಿ ಸದಸ್ಯರು ಹಾಗೂ ಸ್ಥಳೀಯರು ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಿದರು.

## ಬೆದರಿಕೆ ಹಾಕಿಲ್ಲ, ನಿಂದಿಸಿದ್ದಕ್ಕೆ ದೂರು




• ಪ್ರಜೋದಯ ವರದಿ

**ಹಾಸನ:** ಬೀದಿ ನಾಯಿಗಳ ಹಿತ ರಕ್ಷಣಾ ವೇದಿಕೆಯಿಂದ ನಾಯಿಗಳಿಗೆ ಆಹಾರ ಹಾಕುವ ವಿಚಾರಕ್ಕೆ ಪ್ರೊ. ಕೃಷ್ಣಪ್ಪ ಹಾಗು ಅವರ ಪುತ್ರ ಜಗಳ ತೆಗೆದು ನಿಂದಿಸಿದ್ದಕ್ಕೆ ಬೇಸರದಿಂದ ದೂರು ನೀಡಲಾಗಿದೆಯೇ ವಿನಃ ಯಾರಿಗೂ ಬೆದರಿಕೆ ಹಾಕಿಲ್ಲ ಎಂದು ದಲಿತ ಪರ ಹೋರಾಟಗಾರರ ಒಕ್ಕೂಟದ ಎನ್.ಟಿ.ದಿನೇಶ್ ಅವರು ಸ್ಪಷ್ಟನೆ ನೀಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕುವೆಂಪು ನಗರ ಬಡಾವಣೆಯಲ್ಲಿ ಮಾರ್ಚ್ 1ರ ರಾತ್ರಿ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಾವು, ನಮ್ಮ ಸ್ನೇಹಿತರಾದ ಡಾ.ಶ್ರೀನಿವಾಸ್ ಮೂರ್ತಿ ಅವರು ಬೀದಿ ನಾಯಿಗಳಿಗೆ ಆಹಾರ ಹಾಕಿಲ್ಲ. ಕಳೆದ ಮೂರು ವರ್ಷಗಳಿಂದ ಈ ಕೆಲಸ ಮಾಡಿಕೊಂಡು ಬರುತ್ತಿದ್ದೇವೆ. ಕುವೆಂಪು ನಗರದಲ್ಲಿ ಮಾತ್ರವೇ ನಾಯಿಗಳಿಗೆ ಅನ್ನ ಹಾಕುವುದಿಲ್ಲ. ನಗರದ ಹಲವು ಕಡೆಗಳಲ್ಲಿ ಈ ಕೆಲಸ ಮಾಡಿಕೊಂಡು ಬರುತ್ತಿದ್ದೇವೆಂದು ಹೇಳಿದರು.

ಪ್ರೊ.ಕೃಷ್ಣಪ್ಪ ಹಾಗೂ ಅವರ ಪುತ್ರ ವೈದ್ಯರನ್ನು ತಡೆದು, ಇಲ್ಲಿ ಯಾವ ನಾಯಿಗೂ ಊಟ ಹಾಕಬೇಡಿ ಎಂದು ಧಮ್ಕಿ ಹಾಕಿದ್ದಾರೆ. ಆಗ ವೈದ್ಯರು ನನಗೆ ಹೇಳಿದರು. ಅದಾದ ಬಳಿಕವೂ ವೈದ್ಯರು ತಮ್ಮ ಕರ್ತವ್ಯ ಮುಂದುವರಿಸಿದಾಗ ನಿಂದಿಸಿದ್ದಾರೆ. ಆಗ ವೈದ್ಯರು ನನ್ನ ಹೆಸರು ಹೇಳಿದಾಗ ನನ್ನ ಹೆಸರು ಹೇಳಿ ತಂದೆ-ಮಗ ಜಾತಿ ನಿಂದನೆ ಮಾಡಿದ್ದಾರೆ. ಒಂದು ನಾಯಿಗೆ ಕಲ್ಲಿನಿಂದ ಹೊಡೆದು ಸಾವಿಗೆ ಕಾರಣರಾಗಿದ್ದಾರೆ. ನನ್ನನ್ನು ಜಾತಿ ಹಿಡಿದು ನಿಂದಿಸಿರುವ ಅವರ ವಿರುದ್ಧ ದಲಿತ ದೌರ್ಜನ್ಯಪ್ರಕರಣ ದಾಖಲು ಮಾಡುವೆ. ನಾನು ದುಡ್ಡಿನ ವಿಚಾರ ಮಾತನಾಡಿಲ್ಲ ಎಂದರು.

ಮುಖಂಡರಾದ ವಿಠಲ್, ಜಗದೀಶ್, ದೇವರಾಜ, ಡಾ. ಶ್ರೀನಿವಾಸ್‌ಮೂರ್ತಿ, ಶಿವಣ್ಣ ಇದ್ದರು.

# ರೇಣುಕಾ ಯಲ್ಲಮ್ಮ ದೇವಿ-ಜಮದಗ್ನಿ ಋಷಿ ಕಲ್ಯಾಣೋತ್ಸವ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಕೋವಿಪೇಟೆ ದುರ್ಗಮ್ಮ ದೇವಸ್ಥಾನದ ಹಿಂಭಾಗದಲ್ಲಿರುವ ಶ್ರೀ ಶಕ್ತಿ ಶ್ರೀ ರೇಣುಕಾ ಯಲ್ಲಮ್ಮ ದೇವಿ, ದುರ್ಗಾ ದೇವಿ ಕ್ಷೇತ್ರದಲ್ಲಿ ಹೋಳಿ ಹುಣ್ಣಿಮೆ ಅಂಗವಾಗಿ ನಡೆಯುವ 19ನೇ ವರ್ಷದ ರೇಣುಕಾ ಯಲ್ಲಮ್ಮ ದೇವಿ ಹಾಗೂ ಜಮದಗ್ನಿ ಋಷಿಯವರ ಕಲ್ಯಾಣೋತ್ಸವ ಮತ್ತು ಜಾತ್ರೆ ಮಹೋತ್ಸವ ನಡೆಯಿತು.

ಇಂದು ಮತ್ತು ನಾಳೆ ಎರಡು ದಿನಗಳ ಕಾಲ ನಡೆಯಲ್ಲಿರುವ ಮಹೋತ್ಸವದಲ್ಲಿ ವಿವಿಧ ಧಾರ್ಮಿಕ ಪೂಜೆ, ಹೋಮಹವನ ಹಾಗೂ ವಿಶೇಷ ಕಾರ್ಯಕ್ರಮಗಳು ಜರುಗಲಿದ್ದು, ಮೊದಲ ದಿನ ದೇವಿಗೆ ಚಂಡಿ ಹೋಮ, ದ್ವಿತಹೋಮ ಹಾಗೂ ಜಯಾದಿಹೋಮ ಸೇರಿ ಹಲವು ವಿಧಿವಿಧಾನಗಳನ್ನು ನೆರವೇರಿಸಲಾಯಿತು.

ಬಳಿಕ ದೇವಾಲಯದ ಗಂಗೆಸ್ಥಾನವನ್ನು ಪವಿತ್ರಗೊಳಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಶ್ರೀ ರೇಣುಕಾ ಯಲ್ಲಮ್ಮ ದೇವಿ ಹಾಗೂ ಜಮದಗ್ನಿ ಋಷಿಯವರ ದಿವ್ಯ ಕಲ್ಯಾಣೋತ್ಸವವನ್ನು ಸಂಪ್ರದಾಯ ಬದ್ಧವಾಗಿ ನೆರವೇರಿಸಲಾಯಿತು.



ಈ ಕ್ಷೇತ್ರವು ಧಾರ್ಮಿಕ ಮಹತ್ವವನ್ನು ಹೊಂದಿದ್ದು, ಚೌಡೇಶ್ವರಿ, ಯಲ್ಲಮ್ಮ ಸೇರಿ ಮೂರು ದೈವಶಕ್ತಿಗಳು ನೆಲೆಸಿವೆ ಎಂದು ಭಕ್ತರು ನಂಬಿಕೆ ಹೊಂದಿದ್ದಾರೆ. ಧರ್ಮ, ನ್ಯಾಯ ಹಾಗೂ ನೀತಿ ಮೌಲ್ಯಗಳನ್ನು ಸಾರುವ ಈ 3 ಶಕ್ತಿಗಳ ಆರಾಧನೆ ಈ ಕ್ಷೇತ್ರದ ವಿಶೇಷತೆ ಎಂದು ಹೇಳಲಾಗುತ್ತದೆ. ದೇವಿ ಹುತ್ತದ ರೂಪದಲ್ಲಿ ನೆಲೆಸಿರುವುದು ಕ್ಷೇತ್ರದ ಮತ್ತೊಂದು ವಿಶೇಷವಾಗಿದ್ದು, ಈ ಸ್ಥಳವನ್ನು ಭಕ್ತರು ಅಪಾರ ಭಕ್ತಿಯಿಂದ ಆರಾಧಿಸುತ್ತಾರೆ.

ಧರ್ಮದರ್ಶಿ ಉಮೇಶ್‌ಸ್ವಾಮಿ ಅವರು ಮಾತನಾಡಿ, ಈ ಕ್ಷೇತ್ರದಲ್ಲಿ ಪ್ರತಿವರ್ಷವೂ ಲೋಕ ಕಲ್ಯಾಣ ಹಾಗೂ ಲೋಕ ರಕ್ಷಣೆಯ ಸಂಕಲ್ಪದೊಂದಿಗೆ ಜಾತ್ರೆ ಮತ್ತು ಕಲ್ಯಾಣೋತ್ಸವವನ್ನು ಆಚರಿಸಲಾಗುತ್ತದೆ. ಈಗಾಗಲೇ 19ನೇ ವರ್ಷಕ್ಕೆ ಕಾಲಿಟ್ಟಿರುವ ಮಹೋತ್ಸವ ಭಕ್ತರ ಸಹಕಾರ ದಿಂದಲೇ ನಿರಂತರವಾಗಿ ನಡೆಯುತ್ತಿದೆ. ವಿವಿಧ ರಾಜ್ಯ, ಜಿಲ್ಲೆ ಹಾಗು ತಾಲ್ಲೂಕುಗಳಿಂದ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಆಶೀರ್ವಾದ ಪಡೆಯುತ್ತಾರೆ. ಭಕ್ತರ ಕಷ್ಟಗಳನ್ನು ಪರಿಹರಿಸಿ ಅವರಿಗೆ ಆಶೀರ್ವಾದ ನೀಡುವ ಶಕ್ತಿಯು ಈ ದೇವಿಗೆ ಇದೆ ಎಂಬುದು ಭಕ್ತರ ನಂಬಿಕೆ ಎಂದು ಹೇಳಿದರು.

ಚಿತ್ರದುರ್ಗ, ದಾವಣಗೆರೆ, ಭದ್ರಾವತಿ, ಚಿಕ್ಕಮಗಳೂರು, ಕಡೂರು ಸೇರಿ ಅನೇಕ ಜಿಲ್ಲೆಗಳ ಭಕ್ತರು ಹಾಗೂ ಜೋಗತಿ ಅಮ್ಮನವರು ಈ ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದಾರೆ. ರಾಜಕೀಯ ಸಂಪರ್ಕವಿಲ್ಲದೆ ಸಂಪೂರ್ಣವಾಗಿ ಭಕ್ತರ ಸಹಕಾರ ಹಾಗೂ ಸೇವಾ ಭಾವ ದಿಂದಲೇ ಈ ಕ್ಷೇತ್ರ ಅಭಿ ವೃದ್ಧಿಯ ದಾರಿಯಲ್ಲಿ ಸಾಗುತ್ತಿರು ವುದು ವಿಶೇಷ ಎಂದರು.

ಮಂಡ್ಯ ಜಿಲ್ಲೆಯ ಶಿವಾರ ಮೂಲದ ಕೀರ್ತನಕಾರ ಹಾಗೂ ಗಾಯಕ ಶಿವಾರ ಉಮೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಧಾರ್ಮಿಕ ಉಪನ್ಯಾಸ ಮತ್ತು ಕೀರ್ತನೆಗಳ ಮೂಲಕ ಭಕ್ತರನ್ನು ಆಧ್ಯಾತ್ಮಿಕವಾಗಿ ಪ್ರೇರೇಪಿಸಲಿದ್ದಾರೆ.

ಜಾತ್ರೆ ಮಹೋತ್ಸವದ ಅಂಗವಾಗಿ ದೇವಿಗೆ ವಿಶೇಷ ಪೂಜೆ, ಭಕ್ತರಿಗೆ ಪ್ರಸಾದ ವಿತರಣೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಮುಂದಿನ ದಿನಗಳಲ್ಲೂ ನಡೆಯಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವಿಯ ದರ್ಶನ ಪಡೆದು ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ದೇವಸ್ಥಾನದ ಆಡಳಿತ ಮಂಡಳಿ ಮನವಿ ಮಾಡಿದ್ದಾರೆ.

# ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಮಂಜು ಚಾಲನೆ



• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ರಸ್ತೆ ಕಾಮಗಾರಿ ಆರಂಭಿಸುವ ಮೊದಲು ಯುಜಿಡಿ, ಕುಡಿಯುವ ನೀರು ಹಾಗೂ ಗ್ಯಾಸ್ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಶಾಸಕ ಎ.ಮಂಜು ಅವರು ಸೂಚಿಸಿದರು.

ಪಟ್ಟಣದ 2ನೇ ವಾರ್ಡ್‌ನಲ್ಲಿ 11 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹೊಸದಾಗಿ ರಸ್ತೆ ನಿರ್ಮಿಸಿದ ಬೆನ್ನಲ್ಲೇ ವಿವಿಧ ಕಾಮಗಾರಿಗಳಿಗಾಗಿ ಅಗೆಯುವ ಕಾರಣ ಹಾಳಾಗಿ ಜನರು ಕಿರಿಕಿರಿ ಅನುಭವಿಸಬೇಕಿದೆ. ರಸ್ತೆ ನಿರ್ಮಾಣ ಪ್ರಾರಂಭಿಸುವ ಮುನ್ನವೇ ಇಲ್ಲಿ ಆಗಬೇಕಾದ ಅಗತ್ಯ ಕಾಮಗಾರಿಗಳು ಪೂರ್ಣಗೊಂಡಿವೆಯೇ ಎಂದು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಹಾಸನ ಪಿಯು ಕಾಲೇಜು ಪಕ್ಕದ ರಸ್ತೆ ಹಾಳಾಗಿದ್ದು, ಅಲ್ಲಿ ಗುಣಮಟ್ಟದ ರಸ್ತೆ ನಿರ್ಮಿಸುವಂತೆ ಸ್ಥಳೀಯ ಕೌನ್ಸಿಲರ್ ಮನವಿ ಮಾಡಿದ್ದರು. ಅದರಂತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು. ಮುಖಂಡರಾದ ನರಸೇಗೌಡ, ಗಾಂಧಿನಗರ ದಿವಾಕರ್, ಮುತ್ತಿಗೆ ರಾಜೇಗೌಡ, ಎಚ್.ಎಸ್.ರಶ್ಮಿ ಪ್ರವೀಣ್, ಸುಮಿತ್ರ, ಅನಿಕೇತನ್, ಹೂವಣ್ಣ, ಅಲೀಂ ಪಾಷ, ಸಣ್ಣಸ್ವಾಮಿ ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK